MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111


YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 05 | ಸಂಚಿಕೆ: 29 | ಶುಕ್ರವಾರ : 14-11-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 29 | FRIDAY : 14-11-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಮೇಕೆದಾಟು: ತಮಿಳುನಾಡು ಅರ್ಜಿ ವಜಾ




**ಬೆಂಗಳೂರು, ನ. 13–** ಮೇಕೆದಾಟು ಯೋಜನೆಯನ್ನು ಪ್ರಶ್ನಿಸಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ.

ಮೇಕೆದಾಟು ಯೋಜನೆಯ ಸಮತೋಲನ ಜಲಾಶಯ ನಿರ್ಮಾಣಕ್ಕೆ ಮುಂದಾಗಿರುವ ಕರ್ನಾಟಕ ಸರ್ಕಾರದ ಕ್ರಮ ಪ್ರಶ್ನಿಸಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿರವರ ನ್ಯಾಯಪೀಠ ತಮಿಳುನಾಡಿನ ಅರ್ಜಿಯನ್ನು ವಜಾ ಮಾಡಿದೆ.

ಮೇಕೆದಾಟು ಯೋಜನೆ ಇನ್ನು ಆರಂಭಿಕ ಹಂತದಲ್ಲಿದೆ. ಜತೆಗೆ ಈ ಯೋಜನೆಯು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಕೇಂದ್ರ ಜಲ ಆಯೋಗದಂತಹ ತಜ್ಞ ಸಂಸ್ಥೆಗಳ ಪರಿಶೀಲನೆಯಲ್ಲಿದೆ. ಇನ್ನು ಯಾವುದೇ ನಿರ್ವಹಣಾ ಕಾರ್ಯ ಆರಂಭವಾಗಿಲ್ಲ. ಹೀಗಾಗಿ ಮಧ್ಯ ಪ್ರವೇಶ ಮಾಡಲ್ಲ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಹೇಳಿ, ತಮಿಳುನಾಡಿನ ಅರ್ಜಿಯನ್ನು ವಜಾ ಮಾಡಿದ್ದಾರೆ.

ಕರ್ನಾಟಕದ ಮೇಕೆಡಾಟು ಜಲಾಶಯ ಯೋಜನೆಗೆ ತಮಿಳುನಾಡು ನೀಡಿದ ವಿರೋಧವನ್ನು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಯೋಜನೆಯ ವಿವರಣಾತ್ಮಕ ವರದಿ ತಯಾರಿಕೆಗೆ ನೀಡಲಾದ ಅನುಮತಿಯ ವಿರುದ್ಧ ತಮಿಳುನಾಡು ದಾಖಲಿಸಿದ್ದ ಅರ್ಜಿಯು "ಅಕಾಲಿಕ" ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಬಿ. ಆರ್. ಗವಾಯಿ, ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಮತ್ತು ನ್ಯಾಯಮೂರ್ತಿ ಎನ್. ವಿ. ಅಂಜಾರಿಯಾ ಅವರನ್ನು ಒಳಗೊಂಡ ತ್ರಿ ಸದಸ್ಯ ಪೀಠ ನೀಡಿದೆ. ತಮಿಳುನಾಡಿನ ಆಕ್ಷೇಪಗಳು ಮತ್ತು ಕಾವೇರಿ ನೀರು ನಿರ್ವಹಣಾ ಅಧಿಕಾರ ಮತ್ತು ಕಾವೇರಿ ನೀರು ನಿಯಂತ್ರಣ ಸಮಿತಿ ಸಲಹೆಗಳನ್ನು ಪರಿಗಣಿಸಿ ತಯಾರಿಕೆಗೆ ಕೇಂದ್ರ ಜಲ ಆಯೋಗ ಅನುಮತಿ ನೀಡಿದೆ ಎಂದು ಕೋರ್ಟ್ ಗಮನಿಸಿದ್ದೇವೆ. ಯೋಜನೆಗೆ ಅಂತಿಮ ಅನುಮತಿ ನೀಡುವಾಗ ಜಲ ಆಯೋಗ ಮತ್ತು ಕಾವೇರಿ ನೀರು ನಿರ್ವಾಹಣಾ ಪ್ರಾದಿಕಾರ (ಅಫಖಅ)ಗಳ ಅನುಮತಿ ಅಗತ್ಯವಿರುತ್ತದೆ ಎಂದೂ ಸಿಡ್ಲೂಸಿ ಸ್ಪಷ್ಟಪಡಿಸಿದೆ. ಆದ್ದರಿಂದ ಈ ಹಂತದಲ್ಲಿ ತಮಿಳುನಾಡಿನ ಅರ್ಜಿ ಅಕಾಲಿಕ ಎಂದು ಪೀಠವು ಅಭಿಪ್ರಾಯಪಟ್ಟಿದೆ.

ಸಿಡ್ಲೂಸಿ ಯೋಜನೆಯ ಡಿಪಿಆರ್ ಅನ್ನು ಅಂತಿಮವಾಗಿ ಅನುಮೋದಿಸಿದರೆ, ಅದನ್ನು ಪ್ರಶ್ನೆ ಮಾಡಲು ತಮಿಳುನಾಡು ಸ್ವತಂತ್ರವಾಗಿರುತ್ತದೆ ಎಂದು ನ್ಯಾಯಾಲಯವು ಸ್ಪಷ್ಟಪಡಿಸಿದೆ.

ತಮಿಳುನಾಡಿನ ವಾದ:ತಮಿಳುನಾಡಿನ ಪರ ವಕೀಲ ಮುಕುಲ್ ರೋಹತ್ಗಿ, ಮೇಕಡಾಟು ಯೋಜನೆಯಿಂದ ಕಾವೇರಿಯನ್ನು ಅವಲಂಬಿಸಿರುವ ತಮಿಳುನಾಡಿನ ರೈತರಿಗೆ ಹಾನಿ ಉಂಟಾಗಬಹುದು ಎಂದು ವಾದಿಸಿದ್ದರು. ಬಿಳಿಗುಂಡ್ಲು ಅಳತೆ ಕೇಂದ್ರಕ್ಕಿಂತ ಮೇಲಿನ ಪ್ರದೇಶದಲ್ಲಿ ಜಲಾಶಯ ನಿರ್ಮಾಣವಾದರೆ, ತಮಿಳುನಾಡಿಗೆ ನೀರು ಬಿಡುಗಡೆ ಮಾಡುವುದು ಪ್ರತಿಕೂಲವಾಗುತ್ತದೆ ಎಂದು ಅವರು ತಿಳಿಸಿದ್ದರು.(2ನೇಪುಟಕ್ಕೆ..)

## ಕೆಂಪು ಕೋಟೆ ಸ್ಫೋಟ ಪ್ರಕರಣ : ಮೂರನೇ ಕಾರಿಗಾಗಿ ಶೋಧ



**ನವದೆಹಲಿ, ನ.13–**ಕೆಂಪು ಕೋಟೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದ ಮೂರನೇ ಕಾರನ್ನು ಬಹು ಭದ್ರತಾ ಸಂಸ್ಥೆಗಳು ಹುಡುಕುತ್ತಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸೋಮವಾರ ಸಂಜೆ ಕೆಂಪು ಕೋಟೆ ಬಳಿ ಬಿಳಿ ಬಣ್ಣದ ಹುಂಡೈ ಐ20 ಸ್ಫೋಟಗೊಂಡು 12 ಜನರು ಸಾವನ್ನಪ್ಪಿ 30 ಜನರು ಗಾಯಗೊಂಡಿದ್ದರೂ, ತನಿಖಾಧಿಕಾರಿಗಳು ನಂತರ ಎರಡನೇ ವಾಹನ ಕೆಂಪು ಫೋರ್ಡ್ ಇಕೋಸ್ಪೋರ್ಟ್ ಫರಿದಾಬಾದ್‌ನಲ್ಲಿ ಪತ್ತೆ ಹಚ್ಚಿದ್ದರು.

ಆದಾಗ್ಯೂ, ಮಾರುತಿ ಬ್ರೆಝಾ ಎಂದು ಶಂಕಿಸಲಾದ ಮೂರನೇ ಕಾರು ಪತ್ತೆಯಾಗಿಲ್ಲ.ಕಾಣೆಯಾದ ಮೂರನೇ ಕಾರನ್ನು ಆರೋಪಿಗಳು ವಿಚಕ್ಷಣ ಅಥವಾ ತಪ್ಪಿಸಿಕೊಳ್ಳಲು ಬಳಸಿದ್ದಾರೆಂದು ಶಂಕಿಸಲಾಗಿದೆ.

ಮೂರನೇ ಕಾರನ್ನು ಬಹು ತಂಡಗಳು ಹುಡುಕುತ್ತಿವೆ ಎಂದು ಮೂಲಗಳು ತಿಳಿಸಿವೆ.ಮಾರುತಿ ಬ್ರೆಝಾವನ್ನು ಪತ್ತೆಹಚ್ಚಲು ದೆಹಲಿ-ಎನ್‌ಸಿಆರ್ ಮತ್ತು ಪಕ್ಕದ ರಾಜ್ಯಗಳಲ್ಲಿ ಶೋಧ ನಡೆಸಲಾಗುತ್ತಿದೆ ಎಂದು ಅವರು ಹೇಳಿದರು.

## ಮಕ್ಕಳ ರಕ್ಷಣೆ, ಸುರಕ್ಷತೆ ನಮ್ಮೆಲ್ಲರ ಜವಾಬ್ದಾರಿ: ವೆಂಕಟೇಶ

ಯುವ ಮಾರ್ಗ ಸುದ್ದಿ



**ರಾಯಚೂರು,ನ.13–** ಮಕ್ಕಳು ದೇಶದ ಆಸ್ತಿ, ಅವರ ರಕ್ಷಣೆ, ಸುರಕ್ಷತೆ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಈ ದಿಶೆಯಲ್ಲಿ ಮಕ್ಕಳ ಹಕ್ಕುಗಳನ್ನು ಸುಲಭವಾಗಿ ಅನುಷ್ಠಾನಗೊಳಿಸಲು ಕಾಯ್ದೆಗಳನ್ನು ಅರಿತುಕೊಳ್ಳಬೇಕು. ಇದರಿಂದ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸಿ ಕೊಡಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಸದಸ್ಯರಾದ ವೆಂಕಟೇಶ ಅವರು ಹೇಳಿದರು.

ಬೆಂಗಳೂರಿನ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನವೆಂಬರ್ 13ರಂದು ನಡೆದ ಬಾಲನ್ಯಾಯ (ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015, ಬಾಲ್ಯವಿವಾಹ ನಿಷೇಧ ಕಾಯ್ದೆ-2006, ಪೋಕ್ಸ ಕಾಯ್ದೆ-2012 ಹಾಗೂ ದತ್ತು ನಿಯಾಮವಳಿಗಳು-2022ರ ಕುರಿತು ಒಂದು ದಿನದ ತರಬೇತಿ ಕಾರ್ಯಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಮ್ಮಲ್ಲಿರುವ ಕಾನೂನುಗಳು ಮಾನವೀಯ ಮೌಲ್ಯಗಳಿಂದ ಕೂಡಿವೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಹೇಳುವಂತೆ ಕಾನೂನುಗಳ ಸಮರ್ಪಕ ಅನುಷ್ಠಾನವು ನಮ್ಮಲ್ಲಿನ ಇಚ್ಛಾಶಕ್ತಿಯ ಮೇಲೆ ನಿಂತಿದೆ ಎಂದು ತಿಳಿಸಿದರು.

ಬಾಲ್ಯ ವಿವಾಹ, ಭಿಕ್ಷಾಟನೆ, ಲೈಂಗಿಕ ದೌರ್ಜನ್ಯದಂತಹ ಪ್ರಕರಣಗಳು ಜಿಲ್ಲೆಯಲ್ಲಿ ಶೂನ್ಯಕ್ಕಿಳಿಯುವ ದಿಶೆಯಲ್ಲಿ ಪ್ರತಿಯೊಬ್ಬರು ಜವಾಬ್ದಾರಿಯಿಂದ ಕೆಲಸ ಮಾಡಬೇಕಿದೆ ಎಂದು(2ನೇಪುಟಕ್ಕೆ)

## ನ. 15ರಂದು ರಾಯಚೂರ ಜಿಲ್ಲಾ ಕೇಂದ್ರದಲ್ಲಿ ಬೃಹತ್ ಆರೋಗ್ಯ ಶಿಬಿರ, ಕಾನೂನು ಸಾಕ್ಷರತಾ ಕಾರ್ಯಕ್ರಮ

ಯುವ ಮಾರ್ಗ ಸುದ್ದಿ



**ರಾಯಚೂರು.ನ.13–**ಬೆಂಗಳೂರಿನ ಕಾನೂನು ಸೇವೆಗಳ ಪ್ರಾಧಿಕಾರವು ರಾಯಚೂರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ ಮತ್ತು ಜಿಲ್ಲಾ ವಕೀಲರ ಸಂಘದಿಂದ ನವೆಂಬರ್ 15ರಂದು ರಾಯಚೂರು ಜಿಲ್ಲಾ ಕೇಂದ್ರದಲ್ಲಿ ಬೃಹತ್ ಆರೋಗ್ಯ ಶಿಬಿರ ಮತ್ತು ಕಾನೂನು ಸಾಕ್ಷರತಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗೌರವಾನ್ವಿತ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ

ಎಸ್ ಶಶಿಧರ ಶೆಟ್ಟಿ ಅವರು ಹೇಳಿದರು.

ಜಿಲ್ಲಾ ಕೋರ್ಟ ಸಂಕೀರ್ಣದ ಸಭಾಂಗಣದಲ್ಲಿ ನವೆಂಬರ್ 13ರಂದು ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ದೇವದಾಸಿಯರ ಸಮೀಕ್ಷೆ ಚಾಲ್ತಿಯಲ್ಲಿದೆ. ಅದರಂತೆ ದೇವದಾಸಿ ಪದ್ಧತಿಯನ್ನು ಹೋಗಲಾಡಿಸುವ ಮುಖ್ಯ ಉದ್ದೇಶದೊಂದಿಗೆ ನವೆಂಬರ್ 15ರಂದು ದೇವದಾಸಿಯರ ಸ್ಥಿತಿಗತಿ ವಿಶೇಷ ಉಪನ್ಯಾಸ ಮತ್ತು ನಾನಾ ಕಾರ್ಯಕ್ರಮ ಆಯೋಜಿಸಲಾಗಿದೆ.

ನಮ್ಮ ಮಧ್ಯೆ ಇರುವ ಅನೇಕ ಮಹಿಳೆಯರು ಮತ್ತು ವಿಶೇಷವಾಗಿ ದೇವದಾಸಿ ಮಹಿಳೆಯರಿಗೆ ಇದುವರೆಗೆ ಸರಿಯಾದ ಆಧಾರ್ ಕಾರ್ಡ ಇಲ್ಲ. ಕೆಲವರಿಗೆ ಪಡಿತರ ಚೀಟಿ ದೊರೆತಿಲ್ಲ. ಸರ್ಕಾರದ ಯೋಜನೆಗಳ ಲಾಭ ದೊರೆತಿಲ್ಲ. ಕಾನೂನು ಜ್ಞಾನದ ಕೊರತೆಯಿಂದ ಕೆಲವರು ಇದುವರೆಗೆ ಡ್ರೈವಿಂಗ್ ಲೈಸೆನ್ಸ್ ಕೂಡ ಮಾಡಿಸಿಲ್ಲ. ಹೀಗಾಗಿ ನಾವೇ ಜನರ ಬಳಿಗೆ ಹೋಗಿ ಅವರೊಂದಿಗೆ ಮಾತನಾಡಬೇಕು. ಅವರ ಅಹವಾಲುಗಳಿಗೆ ಸ್ಪಂದನೆ ನೀಡಬೇಕು ಎಂದು ಯೋಜಿಸಿ ಈ ಕಾರ್ಯಕ್ರಮ ಆಯೋಜನೆ ಮಾಡಿದ್ದೇವೆ. ಜಿಲ್ಲೆಯಲ್ಲಿನ ಒಂದು ಗ್ರಾಮವನ್ನಾದರು ವ್ಯಾಜ್ಯ ಮುಕ್ತ ಮಾಡಬೇಕು ಎಂಬುದು ನಮ್ಮ ಗುರಿಯಾಗಿದೆ ಎಂದು ಅವರು ತಿಳಿಸಿದರು.

ಆರೋಗ್ಯ ಇಲಾಖೆಯ ಜೊತೆಗೆ ಸೇರಿ ದೇವದಾಸಿಯರು ಸೇರಿದಂತೆ ಇನ್ನುಳಿದ ಮಹಿಳೆಯರಿಗೆ ಮೆಗಾ ಹೆಲ್ತ್ ಕ್ಯಾಂಪ್ ಆಯೋಜನೆ ಮಾಡಿದ್ದೇವೆ. ಎಷ್ಟೊ ಜನರಿಗೆ ನಾನಾ ಕಾಯಿಲೆಗಳ ಬಗ್ಗೆ ಅರಿವಿಲ್ಲ. ಜನತೆಗೆ ಜಾಗೃತಿ ಮೂಡಿಸಲು ಅಂದು ಕಾರ್ಯಕ್ರಮದ ಸ್ಥಳದಲ್ಲಿ ಸ್ಟಾಲ್ ಅಳವಡಿಸಿ ಆರೋಗ್ಯ ಸೇರಿದಂತೆ ನಾನಾ ಸರ್ಕಾರಿ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುತ್ತಿದ್ದೇವೆ. ಇದೆ ವೇಳೆ ಮಹಿಳೆಯರಿಗೆ ಆರೋಗ್ಯ ತಪಾಸಣೆ ನಡೆಯಲಿದೆ.

ದೇವದಾಸಿಯರಿಗೆ ಇರುವ ಸರ್ಕಾರದ (2ನೇಪುಟಕ್ಕೆ..)

## ಭಾರತದ ಶಿಕ್ಷಣಕ್ಕೆ ಆಜಾದರ ಕೊಡುಗೆ ಅಪಾರ : ಬಯ್ಯಾಪುರ

ಯುವ ಮಾರ್ಗ ಸುದ್ದಿ



**ಲಿಂಗಸುಗೂರು,ನ.13–**ದೇಶದ ಸ್ವಾತಂತ್ರ್ಯ ಚಳವಳಿಯ ಮುಂಚೂಣಿ ಹೋರಾಟಗಾರ, ದೇಶದ ಮೊದಲು ಶಿಕ್ಷಣ ಸಚಿವ ಮೌಲಾನಾ ಅಬುಲ್ ಕಲಾಂ ಆಜಾದ್. ಇವರ ಕೊಡುಗೆ ಭಾರತದ ಶಿಕ್ಷಣಕ್ಕೆ ಅಪಾರ. ಇವರು ಬಹುಭಾಷಾ ಪಂಡಿತ, ಮುತ್ಸದ್ದಿ ರಾಜಕಾರಣಿ, ಶಿಕ್ಷಣ ತಜ್ಞರಾಗಿದ್ದರು ಎಂದು ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪುರ ಹೇಳಿದರು.

ಪಟ್ಟಣದಲ್ಲಿ ಮೌಲಾನ ಅಬುಲ್ ಕಲಾಂ ಜಯಂತಿಯ ಅಂಗವಾಗಿ ಮೌಲಾನ ಆಜಾದ್ ಸರ್ಕಲ್ ನಲ್ಲಿ ಪುಷ್ಪ ಸಮರ್ಪಣೆ ಮಾಡಿ ಮಾತನಾಡಿದ ಅವರು, ಸ್ವಾತಂತ್ರ್ಯ ನಂತರ ದೇಶದ ಮೊದಲು ಶಿಕ್ಷಣ ಸಚಿವರಾಗಿ ಕೋಟ್ಯಂತರ ಭಾರತೀಯರನ್ನು ಸುಶಿಕ್ಷಿತರನ್ನಗಿಸಲು ಶ್ರಮಿಸಿ ಮಹಾನ್ ಶಿಕ್ಷಣ ಪ್ರೇಮಿ ಆಜಾದರು. ಇವರು ಹಿಂದೂ ಮತ್ತು ಮುಸ್ಲಿಮರ ಐಕ್ಯತೆಯನ್ನು ಮೂಡಿಸಲು ಶ್ರಮಿಸಿದರು.

ಈ ಸಂದರ್ಭದಲ್ಲಿ ನಗರ ಯೋಜನೆ ಪ್ರಾಧಿಕಾರದ ಅಧ್ಯಕ್ಷರಾದ ಭೂಪುನಗೌಡ ಪಾಟೀಲ ಕರಡಕಲ್, ಗ್ಯಾರೆಂಟಿ ಯೋಜನ ಜಿಲ್ಲಾಧ್ಯಕ್ಷರಾದ ಪಾಮಯ್ಯ ಮುರಾರಿ, ಪುರಸಭೆ ಮಾಜಿ ಅಧ್ಯಕ್ಷರಾದ ಅನಿಷ್ ಪಾಷಾ, ಇಬ್ರಾಹಿಂ ಗ್ಯಾರಂಟಿ, ಪುರಸಭೆ ಸದಸ್ಯರಾದ ಎಂ ಡಿ ಜಿಲಾನಿ, ಸಲೀಂ ಬೈ, ಸೇರಿದಂತೆ ಸಮಾಜದ ಯುವಕರು ಮುಖಂಡರು ಇದ್ದರು.

## ಜಾಗೀರನಂದಿಹಾಳ-ಸುಣಕಲ್ ಹಳ್ಳದ ಸೇತುವೆ ನಿರ್ಮಾಣಕ್ಕೆ ಒತ್ತಾಯ

ಯುವ ಮಾರ್ಗ ಸುದ್ದಿ



**ಲಿಂಗಸುಗೂರು,ನ.13–**ತಾಲೂಕಿನ ಜಾಗೀರನಂದಿಹಾಳ ಸುಣಕಲ್ ಗ್ರಾಮುಗಳ ಮೂಲಕ ತಾಲೂಕು ಕೇಂದ್ರವನ್ನು ಸಂಪರ್ಕಿಸುವ ಹಳ್ಳಕ್ಕೆ ಸೇತುವೆ ನಿರ್ಮಾಣ ಮಾಡಬೇಕು. ಎಂದು ಗ್ರಾಮಸ್ಥರು ತಹಸೀಲ್ದಾರ್ ಸತ್ಯಮ್ಮರಿಗೆ ಒತ್ತಾಯಿಸಿದರು.

ಸ್ಥಳಕ್ಕೆ ಭೇಟಿ ನೀಡಿದ್ದ ತಹಸೀಲ್ದಾರ್‌ರಿಗೆ ಮನವಿ ಸಲ್ಲಿಸಿದ ಗ್ರಾಮಸ್ಥರು, ರಾಂಪೂರ ಏತ ನೀರಾವರಿ ಕಾಲುವೆಯ ನೀರು ನಿರಂತರವಾಗಿ ಹರಿಯುತ್ತಿರುವ ಪರಿಣಾಮ ಹಳ್ಳದ ಕೆಳಸೇತುವೆ ಮೇಲೆ ನೀರು ಹರಿಯುತ್ತಿದೆ. ನಿತ್ಯ ಈ ರಸ್ತೆಯಲ್ಲಿ ಓಡಾಡುವ ಪಾದಾಚಾರಿಗಳಿಗೆ, ವಾಹನ ಸವಾರರಿಗೆ ತೀವ್ರ ತೊಂದರೆಯಾಗುತ್ತಿದೆ. ಈ ಬಗ್ಗೆ ಕೆಬಿಜೆಎನ್‌ಎಲ್ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಇತ್ತೀಚೆಗೆ ಇದೇ ಹಳ್ಳದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಬಂದು ವ್ಯಕ್ತಿಯೋರ್ವ ಕೊಚ್ಚಿ ಹೋದ ಘಟನೆ ಜರುಗಿತ್ತು. ಅದೃಷ್ಟವಶಾತ್ ಆತ ಪ್ರಾಣಾಪಾಯದಿಂದ ಪಾರಾಗಿದ್ದ ವರ್ಷದ ಹತ್ತು ತಿಂಗಳೂ ಇಲ್ಲಿ ನೀರು ಹರಿಯುತ್ತದೆ. ಮಾಜಿ ಶಾಸಕ ಡಿ.ಎಸ್.ಹೂಲಗೇರಿ ಶ್ರಮದ ಫಲವಾಗಿ 2022-23ನೇ ಸಾಲಿನಲ್ಲಿ 2.50 ಕೋಟಿ ರೂಪಾಯಿ ಸೇತುವೆ ನಿರ್ಮಾಣಕ್ಕೆ ಮಂಜೂರಾಗಿತ್ತು. ಆದರೆ, ಅಧಿಕಾರಿಗಳು ಟೆಂಡರ್ ಕ್ರಿಯೆಯಲ್ಲಿ ನಿರ್ಲಕ್ಷ ಮಾಡಿದ ಪರಿಣಾಮ ಪ್ರಕ್ರಿಯೆ ಸ್ಥಗಿತಗೊಂಡಿದೆ. ಕೂಡಲೇ ಪರಿಶೀಲನೆ ಮಾಡಿ ಶೀಘ್ರ ಸೇತುವೆ ಕಾಮಗಾರಿ ಆರಂಭಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕೆಬಿಜೆಎನ್‌ಎಲ್ ಎಇಇ ಚಂದ್ರಶೇಖರಸ್ವಾಮಿ, ಕಂದಾಯ ನಿರೀಕ್ಷಕ ರಾಮಕೃಷ್ಣನಾಯಕ, ಗ್ರಾಮ ಲೆಕ್ಕಾಧಿಕಾರಿ ಧರಂಸಿಂಗ್, ರೈತ ಸಂಘದ ಜಿಲ್ಲಾಧ್ಯಕ್ಷ ಶಿವಪುತ್ರಗೌಡ, ರೈತ ಮುಖಂಡರಾದ ಶಿವರಾಮಪ್ಪ, ಮಹಾದೇವಪ್ಪ ಸಾಹುಕಾರ, ಹುಲ್ಲನಗೌಡ, ಗದ್ದೆನಗೌಡ, ಕಾಸಿಮ್‌ಸಾಬ ಸೇರಿ ಇತರರು ಇದ್ದರು.

## ಮೊದಲನೇಯ ಪುಟದಿಂದ

# ಮೇಕೆದಾಟು: ತಮಿಳುನಾಡು ಅರ್ಜಿ ವಜಾ

ಕರ್ನಾಟಕದ ವಾದ; ಕರ್ನಾಟಕದ ಪರ ವಕೀಲ ಶ್ಯಾಮ್ ದಿವಾನ್, ತಮಿಳುನಾಡಿನ ಅರ್ಜಿ "ತಪ್ಪು ತಿಳುವಳಿಕೆಯ ಅರ್ಜಿ" ಎಂದು ವಾದಿಸಿದ್ದರು. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ತಮಿಳುನಾಡಿಗೆ 177.25 ಟಿಎಂಸಿ ನೀರು ಬಿಡುಗಡೆ ಮಾಡುವ ಕರ್ನಾಟಕದ ಕರ್ತವ್ಯ ನಿರ್ವಹಣೆಯಾಗದಿದ್ದರೆ, ಅಗತ್ಯ ಅನುಮತಿ ಪಡೆದ ನಂತರ ಜಲಾಶಯ ಯೋಜನೆ ಮುಂದುವರೆಸಲು ಅವಕಾಶ ಇರಬೇಕು ಎಂದು ವಾದಿಸಿದ್ದರು.ಕಾವೇರಿ ನೀರು ಹಂಚಿಕೆ ತೀರ್ಪು ವಿರುದ್ಧ ತಮಿಳುನಾಡು 2007 ರಲ್ಲಿ ದಾಖಲಿಸಿದ್ದ ಮೇಲ್ಮನವಿಯಲ್ಲಿ ಈ ಅರ್ಜಿಯನ್ನು 'ವಿವಿಧ ಅರ್ಜಿ' ಆಗಿ ದಾಖಲಿಸಲಾಗಿತ್ತು. 2018 ರಲ್ಲಿ ಕಾವೇರಿ ನೀರು ನಿರ್ವಹಣಾ ಯೋಜನೆಯಡಿಯಲ್ಲಿ ಸಿಡಬ್ಲ್ಯೂಎಂಎ ಮತ್ತು ಸಿಡಬ್ಲ್ಯೂಆರ್ ಅನ್ನು ರಚಿಸಲಾಗಿದೆ.

ರಾಜ್ಯಕ್ಕೆ ನ್ಯಾಯಸಿಕ್ಕಿದೆ: ಡಿಕೆಶಿ

ಮೇಕೆದಾಟು ಯೋಜನೆಗೆ ಸಂಬಂಧಿಸಿದ ಸುಪ್ರೀಂ ಕೋರ್ಟ್‌ನ ತೀರ್ಪು ಕರ್ನಾಟಕಕ್ಕೆ ಯಾವುದೇ ಹಿನ್ನಡೆಯಲ್ಲ, ಬದಲಿಗೆ ರಾಜ್ಯಕ್ಕೆ "ನ್ಯಾಯ" ಸಿಕ್ಕಿದೆ ಎಂದು ಉಪಮುಖ್ಯಮಂತ್ರಿ ಮತ್ತು ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಂಗಳೂರಿನಲ್ಲಿಂದು ಸುಪ್ರೀಂ ಕೋರ್ಟ್ ತೀರ್ಪಿಗೆ ಪ್ರತಿಕ್ರಿಯೆ ನೀಡಿದ ಅವರು ಮೇಕೆದಾಟು ಕರ್ನಾಟಕದ ಮಹತ್ವದ ಯೋಜನೆ "ಇದು ನಮ್ಮ ಹಕ್ಕು ಮತ್ತು ನಮ್ಮ ನೀರು ನಾವು ಯಾರಿಗೂ ಅಡ್ಡಿ ಮಾಡುತ್ತಿಲ್ಲ. ತಮಿಳುನಾಡಿಗೆ ಲಾಭ ಆಗಲಿದೆ. ಕೋರ್ಟ್ ಆದೇಶದ ಪ್ರಕಾರ ಅವರಿಗೆ ಸಾಕಷ್ಟು ನೀರು ಸಿಗಲಿದೆ. ನಾವು ಯೋಜನೆಯನ್ನು ಮುಂದುವರಿಸಲೇ ಬೇಕು. ಇದು ನಮ್ಮ ಪ್ರದೇಶದಲ್ಲಿ ನಿರ್ಮಾಣವಾಗುತ್ತಿದೆ. ಇದು ಬೆಂಗಳೂರಿನ ಜನರ ವಿಜಯ" ಎಂದರು

ತಮಿಳುನಾಡು ರಾಜ್ಯವು ಕೋರ್ಟ್ ಅನುಮೋದಿಸಿದ ಯೋಜನೆಯನ್ನು ಜಾರಿಗೊಳಿಸಲು ಸಹಕರಿಸಿ ಒಟ್ಟಾಗಿ ಕೆಲಸ ಮಾಡಬೇಕು ಎಂದು ಕೋರಿದರು. "ಕೋರ್ಟ್ ತೀರ್ಪುನಿಂದ ಕರ್ನಾಟಕಕ್ಕೆ ನ್ಯಾಯ ಸಿಕ್ಕಿದೆ. ಇದು ನಮ್ಮ ಪ್ರದೇಶದ ಯೋಜನೆ, ನಾವು ಮುಂದುವರಿಸುವ ಹಕ್ಕು ಹೊಂದಿದ್ದೇವೆ" ಎಂದು ಅವರು ಸ್ಪಷ್ಟಪಡಿಸಿದರು.

ಈ ಯೋಜನೆಯಿಂದ ತಮಿಳುನಾಡಿನ ನೀರಿನ ಹಕ್ಕುಗಳಿಗೆ ಧಕ್ಕೆ ಬರುವುದಿಲ್ಲ ಮತ್ತು ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಆ ರಾಜ್ಯಕ್ಕೆ ನಿಗದಿತ ನೀರಿನ ಪಾಲು ಸಿಗಲಿದೆ ಎಂದು ಹೇಳಿದ ಅವರು ನೀರಿನ ಕೊರತೆಯ ಸಮಯದಲ್ಲಿ ತಮಿಳುನಾಡಿಗೂ ಅನುಕೂಲವಾಗಲಿದೆ ಎಂದರು.

ಬೆಂಗಳೂರು ನಗರದ ಕುಡಿಯುವ ನೀರಿನ ತೀವ್ರ ಸಮಸ್ಯೆಯನ್ನು ಎತ್ತಿ ಪ್ರಸ್ತಾಪಿಸಿದ ಅವರು, ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಉಂಟಾಗುತ್ತಿರುವ ನ್ಯಾಯಿಕ ಮತ್ತು ಆಡಳಿತಾತ್ಮಕ ವಿಳಂಬಗಳಿಗೆ ಇನ್ನು ಮುಂದೆ ಅವಕಾಶ ಇಲ್ಲ ಎಂದರು.

# ಮಕ್ಕಳ ರಕ್ಷಣೆ, ಸುರಕ್ಷತೆ ನಮ್ಮೆಲ್ಲರ ಜವಾಬ್ದಾರಿ: ವೆಂಕಟೇಶ

ಹೇಳಿದರು. ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯು ಕೇವಲ ಒಂದು ದಿನ ಅಥವಾ ಸಹಾಯವಾಣಿ ಕರೆಗಳು ಬಂದಾಗ ಮಾತ್ರ ಕಾರ್ಯಾಚರಣೆ ನಡೆಸಬಾರದು. ನಿತ್ಯ ಕಾರ್ಯಾಚರಣೆಯಲ್ಲಿ ತೊಡಗಿಕೊಳ್ಳಬೇಕು. ಮಕ್ಕಳ ರಕ್ಷಣೆಯ ಜವಾಬ್ದಾರಿಯು ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದ್ದಾಗಿ ಎಂದು ಯಾರು ತಿಳಿಯಬಾರದು. ಮಕ್ಕಳ ರಕ್ಷಣೆಗೆ ಬೇರೆ ಬೇರೆ ಇಲಾಖೆಗಳು ಸಹ ಕೈಜೋಡಿಸಬೇಕು. ಮುಖ್ಯವಾಗಿ ಸಾರ್ವಜನಿಕರು ಸಹಕಾರ ನೀಡಬೇಕೆಂದರು.

ಈ ವೇಳೆ ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರಿನ ಸಿ.ಐ.ಡಿ. ಕಚೇರಿಯ ಪೊಲೀಸ್ ತರಬೇತುದಾರರಾದ ರೋಹಿತ್ ಸಿ.ಜೆ. ಅವರು ಮಾತನಾಡಿ, ಮಕ್ಕಳ ವಲಸೆ, ಗುಳೆ, ಮಕ್ಕಳ ಸಾಗಾಣಿಕೆ, ಮಕ್ಕಳ ಬಿಕ್ಷಾಟನೆ ನಿರ್ಮೂಲನೆ, ಪೋಕ್ಸೋ ಕಾಯ್ದೆ, ಬಾಲ್ಯವಿವಾಹ ನಿಷೇಧ ಕಾಯ್ದೆ, ಬಾಲ ನ್ಯಾಯ ಕಾಯ್ದೆ–2015, ಪೋಕ್ಸೋ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಮಕ್ಕಳ ಬಿಕ್ಷಾಟನೆ ನಿರ್ಮೂಲನೆ ಕುರಿತು ಮಾಹಿತಿ ನೀಡಿದರು.

ಭಿಕ್ಷಾಟನೆ ಮಾಡುತ್ತಿರುವ ಮಕ್ಕಳು, ಬಾಲ ಕಾರ್ಮಿಕ ಮಕ್ಕಳು, ಕಾಣೆಯಾದ ಮಕ್ಕಳು, ಒಂಟಿ ಮಕ್ಕಳು, ಮಾದಕ ವ್ಯಸನಿ, ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯ, ಹಿಂಸೆ ಮತ್ತು ಅತ್ಯಾಚಾರ, ಶಿಕ್ಷಣ ವಂಚಿತ ಮಕ್ಕಳು ಕಂಡು ಬಂದಲ್ಲಿ ತಕ್ಷಣವೇ 1098 ಅಥವಾ 112 ಗೆ ಕರೆ ಮಾಡಬಹುದು ಎಂದು ತಿಳಿಸಿದರು.

ಪ್ರತಿಜ್ಞಾ ವಿಧಿ ಬೋಧನೆ: ಬಾಲನ್ಯಾಯ ಕಾಯ್ದೆ 2015ರ ಸೆಕ್ಷನ್ 81 ರನ್ವಯ ಮಕ್ಕಳನ್ನು ಮಾರಾಟ ಮಾಡಿದವರಿಗೂ ಹಾಗೂ ಮಕ್ಕಳನ್ನು ಕೊಂಡುಕೊಳ್ಳುವವರಿಗೆ 5 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 1 ಲಕ್ಷ ರೂ.ಗಳ ದಂಡವನ್ನು ವಿಧಿಸಬಹುದು. ಒಂದು ವೇಳೆ ಅಂತಹ ಪ್ರಕರಣಗಳಲ್ಲಿ ಆಸ್ಪತ್ರೆ ಸಿಬ್ಬಂದಿಯವರು ಶಾಮೀಲಾಗಿದ್ದಲ್ಲಿ 7 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆಯನ್ನು ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಈ ನಿಟ್ಟಿನಲ್ಲಿ ಕುಟುಂಬವಿಲ್ಲದ ಮಕ್ಕಳಿಗೆ ಕಾನೂನು ಬದ್ಧವಾಗಿ ಕುಟುಂಬವನ್ನು ಒದಗಿಸುವುದು. ಅನಾಥ, ಒಪ್ಪಿಸಲ್ಪಟ್ಟ, ನಿರ್ಗತಿಕ ಮತ್ತು ಪರಿತ್ಯಕ್ತ ಮಕ್ಕಳು ಕಂಡು ಬಂದಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ: 1098/112ಗೆ ಕರೆ ಮಾಡುವುದರ ಮುಖಾಂತರ ಮಕ್ಕಳ ಭವಿಷ್ಯತ್ತಿನ ಹಿತಾಸಕ್ತಿಗಾಗಿ ಎಲ್ಲರೂ ಕೈಜೋಡಿಸಿ ಮಕ್ಕಳನ್ನು ಅನಾಥ ಪ್ರಜ್ಞೆಯಿಂದ ಕಾಪಾಡುವುದರೊಂದಿಗೆ ತಾಯಿತನದ ಹಂಬಲವನ್ನು ನೀಗಿಸೋಣ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಂ.ಪುಟ್ಟಮಾದಯ್ಯ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು.

ಪೋಸ್ಟರ್ ಬಿಡುಗಡೆ: ಈ ವೇಳೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು ಇವರ ವತಿಯಿಂದ ದತ್ತು ಪ್ರಕ್ರಿಯೆ ಹಾಗೂ 1098 ಮಕ್ಕಳ ಸಹಾಯವಾಣಿ ಪೋಸ್ಟರ್‌ಗಳನ್ನು ವಿವಿಧ ಗಣ್ಯರಿಂದ ಬಿಡುಗಡೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಜಿಲ್ಲಾ ಸದಸ್ಯರಾದ ಜಯ ಸುಧಾರಾಣಿ, 1ನೇ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಸ್.ಜೆ. ಕುಮಾರಸ್ವಾಮಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಯು. ನವೀನ್ ಕುಮಾರ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಅಮರೇಶ, ಪೊಲೀಸ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಅಧಿಕಾರಿ, ಸಿಬ್ಬಂದಿ ಇದ್ದರು.

# ನ. 15ರಂದು ರಾಯಚೂರ ಜಿಲ್ಲಾ ಕೇಂದ್ರದಲ್ಲಿ ಬೃಹತ್ ಆರೋಗ್ಯ ಶಿಬಿರ, ಕಾನೂನು ಸಾಕ್ಷರತಾ ಕಾರ್ಯಕ್ರಮ

ಸೌಲಭ್ಯಗಳು ಮತ್ತು ನಾನಾ ವಿಷಯದ ಮೇಲೆ ಉಪನ್ಯಾಸ ನಡೆಯಲಿದೆ. ಕಾರ್ಯಕ್ರಮಕ್ಕೆ ಆಗಮಿಸಲು ಅನುಕೂಲವಾಗುವಂತೆ ದೇವದಾಸಿ ಮಹಿಳೆಯರಿಗೆ ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ಅಂದು ಊಟದ ವ್ಯವಸ್ಥೆ ಕೂಡ ಮಾಡಿದ್ದೇವೆ ಎಂದು ಸಮಾರಂಭದ ಕುರಿತು ವಿವರಿಸಿದರು.

ಅಂದು, ಗೌರವಾನ್ವಿತ ಕರ್ನಾಟಕದ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳು ಕಾರ್ಯಕ್ರಮ ಉದ್ಘಾಟಿಸುವರು. ಹೈಕೋರ್ಟ್‌ನ ನ್ಯಾಯಾಧೀಶರು ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯಪಾಲಕ ಅಧ್ಯಕ್ಷರು,

ರಾಯಚೂರು ಜಿಲ್ಲಾ ಆಡಳಿತಾತ್ಮಕ ನ್ಯಾಯಾಧೀಶರು, ರಾಯಚೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು, ಹೈಕೋರ್ಟ್‌ನ ರಿಜಿಸ್ಟರ್ ಜನರಲ್, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಬಾರ್ ಅಸೋಸಿಯೇಶನ್ ಅಧ್ಯಕ್ಷರು ಸೇರಿದಂತೆ ಗಣ್ಯ ಮಾನ್ಯರು ಭಾಗಿಯಾಗಲಿದ್ದಾರೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗೌರವಾನ್ವಿತ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರಾದ ಮಾರುತಿ ಶಿ ಬಾಗಡೆ, ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರಾದ ಹೆಚ್ ಎ ಸಾತ್ವಿಕ್, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯರಾದ ನಲವಾಡೆ, ಸಾರ್ವಜನಿಕ ಸಂಪರ್ಕ ಅಧಿಕಾರಿ ಬಾಲಸುಬ್ರಮಣ್ಯ ಇದ್ದರು.

# ಬಸ್ ಹತ್ತುವಾಗ ಚಿನ್ನಾಭರಣ ಕಳವು

**ಕಲಬುರಗಿ,ನ.13–**ಮಹಿಳೆಯೊಬ್ಬರು ಬಸ್ ಹತ್ತುವಾಗ ಅವರ ಕೊರಳಲ್ಲಿದ್ದ 40 ಸಾವಿರ ರೂ.ಮೌಲ್ಯದ 5 ಗ್ರಾಂ.ಬಂಗಾರದ ಟಿಕ್ಕೆ ಕಳ್ಳತನವಾಗಿರುವ ಘಟನೆ ನಗರದಲ್ಲಿ ನಡೆದಿದೆ.ನಗರದ ರಿಂಗ್ ರೋಡ್ ಸರ್ಕಲ್ ಹತ್ತಿರವಿರುವ ಮರಗಮ್ಮ ಗುಡಿಯ ಪಕ್ಕದಲ್ಲಿ ನಿಂಗಮ್ಮಾ ಪೂಜಾರಿ ಎಂಬುವವರು ಜೇವರ್ಗಿಗೆ ಹೋಗುವ ಬಸ್ ಹತ್ತುವಾಗ ಚಿನ್ನಾಭರಣ ಕಳವಾಗಿದೆ. ಈ ಸಂಬಂಧ ಮೈಲಾರಲಿಂಗ ಪೂಜಾರಿ ಎಂಬುವವರು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

# ಬೃಹತ್ ಆರೋಗ್ಯ ಶಿಬಿರ, ಕಾನೂನು ಸಾಕ್ಷರತಾ ಕಾರ್ಯಕ್ರಮ: ಅಂತಿಮ ಹಂತದ ಸಿದ್ಧತಾ ಸಭೆ



**ಯುವ ಮಾರ್ಗ ಸುದ್ದಿ**

**ರಾಯಚೂರು,ನ.13–** ಬೆಂಗಳೂರಿನ ಕಾನೂನು ಸೇವೆಗಳ ಪ್ರಾಧಿಕಾರವು ರಾಯಚೂರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ ಮತ್ತು ಜಿಲ್ಲಾ ವಕೀಲರ ಸಂಘದ ಸಹಯೋಗದಲ್ಲಿ ನವೆಂಬರ್ 15ರಂದು ರಾಯಚೂರಿನ ಪಂಡಿತ ಸಿದ್ಧರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರದಲ್ಲಿ ಬೆಳಗ್ಗೆ 9.30 ರಿಂದ ಹಮ್ಮಿಕೊಂಡ ಬೃಹತ್ ಆರೋಗ್ಯ ಶಿಬಿರ ಮತ್ತು ಕಾನೂನು ಸಾಕ್ಷರತಾ ಕಾರ್ಯಕ್ರಮದ ಅಂತಿಮ ಹಂತದ ಸಿದ್ಧತಾ ಸಭೆಯು ಗೌರವಾನ್ವಿತ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಮಾರುತಿ ಶಿ ಬಾಗಡೆ ಅವರ ಅಧ್ಯಕ್ಷತೆಯಲ್ಲಿ ನವೆಂಬರ್ 13ರಂದು ಸಂಜೆ ನಡೆಯಿತು.

ನಗರದ ಜಿಲ್ಲಾ ನ್ಯಾಯಾಲಯದ ಸಂಕೀರ್ಣದ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ನ್ಯಾ. ಮಾರುತಿ ಶಿ ಬಾಗಡೆ ಅವರು, ನವೆಂಬರ್ 15ರಂದು ಗೌರವಾನ್ವಿತ ಕರ್ನಾಟಕದ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಸಮ್ಮುಖದಲ್ಲಿ ಕಾರ್ಯಕ್ರಮಗಳು ಶಿಸ್ತುಬದ್ಧವಾಗಿ ನಡೆಯಬೇಕು. ಈ ಕಾರ್ಯಕ್ರಮದ ಸಂಬಂಧ ರಾಯಚೂರು ಜಿಲ್ಲಾಧಿಕಾರಿಗಳು ಈಗಾಗಲೇ ನಾನಾ ಸಮಿತಿಗಳನ್ನು ರಚಿಸಿ, ಹಲವಾರು ಬಾರಿ ಸಭೆ ನಡೆಸಿ ತಿಳಿಸಿ, ಕೆಲಸ ಕಾರ್ಯಗಳನ್ನು ಹಂಚಿಕೆ ಮಾಡಿದಂತೆ ಎಲ್ಲ ಅಧಿಕಾರಿಗಳು ಅಂದು ಮುತುವರ್ಜಿ ವಹಿಸಿ, ಯಾವುದೇ ರೀತಿಯಲ್ಲಿ ಗೊಂದಲವಾಗದಂತೆ ಕಾರ್ಯಕ್ರಮವು ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ಸಮಸ್ಯೆ ಇಲ್ಲದ ಹಳ್ಳಿಗಳೇ ಇಲ್ಲ. ಆದಾಗ್ಯು ರಾಯಚೂರು ಜಿಲ್ಲೆಯಲ್ಲಿ ವ್ಯಾಜ್ಯಗಳು ಕಡಿಮೆ ಇರುವ ಹಳ್ಳಿಯೊಂದನ್ನು ಗುರುತಿಸಿ, ಅಲ್ಲಿನ ವ್ಯಾಜ್ಯಗಳ ಬಗ್ಗೆ ಪರಿಶೀಲಿಸಿ, ಎಲ್ಲಾ ವ್ಯಾಜ್ಯಗಳನ್ನು ಯುದ್ಧೋಪಾದಿಯಲ್ಲಿ ಪರಿಹರಿಸಿ, ಆ ಹಳ್ಳಿಯನ್ನು ವ್ಯಾಜ್ಯ ಮುಕ್ತ ಹಳ್ಳಿ ಎಂದು ಘೋಷಿಸಿ ಎಲ್ಲ ಹಳ್ಳಿಗಳಿಗೆ ಮಾದರಿಯಾಗುವ ಹಾಗೆ ಈ ಕಾರ್ಯಯೋಜನೆಯೊಂದನ್ನು ಪೂರ್ಣಗೊಳಿಸಲು ಜಿಲ್ಲಾಡಳಿತ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಅಗತ್ಯ ಸಹಕಾರ ನೀಡಬೇಕು ಎಂದು ನ್ಯಾ. ಬಾಗಡೆ ಅವರು ತಿಳಿಸಿದರು.

ಸಭೆಯಲ್ಲಿ, ಗೌರವಾನ್ವಿತ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹೆಚ್ ಶಶಿಧರ ಶೆಟ್ಟಿ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸಾರ್ವಜನಿಕ ಸಂಪರ್ಕ ಅಧಿಕಾರಿಗಳಾದ ಪಿ ಎಂ ಬಾಲಸುಬ್ರಮಣಿ, ಗೌರವಾನ್ವಿತ ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾ.ಹೆಚ್ ಎ ಸಾತ್ವಿಕ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಅಪರ ಜಿಲ್ಲಾದಿಕಾರಿಗಳಾದ ಶಿವಾನಂದ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಸ್.ಜೆ.ಕುಮಾರಸ್ವಾಮಿ, ಸಹಾಯಕ ಆಯುಕ್ತರಾದ ಗಜಾನನ ಬಾಳೆ, ರಾಯಚೂರು ತಹಸೀಲ್ದಾರರಾದ ಸುರೇಶ ವರ್ಮಾ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಮಲ್ಲಿಕಾರ್ಜುನ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಈರಣ್ಣ ಬಿರಾದಾರ, ವಿವಿಧ ಇಲಾಖೆಯ ಅಧಿಕಾರಿಗಳಾದ ಡಾ.ಸುರೇಂದ್ರ ಬಾಬು, ನವೀನಕುಮಾರಯು. ವೆಂಕಟೇಶ ಗಳಗ, ಆರತಿ, ಸುನಿತಾ ಘಟಕಾಂಬಳೆ, ಸಿಂಧು ರಘು ಹೆಚ್.ಎಸ್., ಉತ್ತರಾದೇವಿ, ಮಹೇಶ ನಾಯಕ, ಕೆ.ಡಿ. ಬಡಿಗೇರ, ನಾಗರಾಜ ಎಂ., ಜೈಪಾಲ ರೆಡ್ಡಿ, ರಾಘವೇಂದ್ರ ಹಾಗೂ ಇನ್ನಿತರರು ಇದ್ದರು.

# ರೈತರಿಗೆ ಕಳಪೆ ಗುಣಮಟ್ಟದ ಭತ್ತದ ಬೀಜವನ್ನು ನೀಡಿದವರ ಮೇಲೆ ಕ್ರಮ ಕೈಗೊಳ್ಳಿ: ಜಾವೇದ್ ಖಾನ್



**ಯುವ ಮಾರ್ಗ ಸುದ್ದಿ**

**ಮಾನ್ವಿ,ನ.13–** ತಾಲೂಕಿನ ವಿವಿಧ ಗ್ರಾಮಗಳಲ್ಲಿ ಬೀಜ ಮಾರಾಟಗಾರರು ರೈತರಿಗೆ ಕಳಪೆ ಗುಣಮಟ್ಟದ ಭತ್ತದ ಬೀಜವನ್ನು ನೀಡಿದರಿಂದ ಅಂದಾಜು 2 ಸಾವಿರ ಎಕರೆಯಲ್ಲಿ ಬೆಳೆಯಲಾದ ಭತ್ತದ ಬೆಳೆ ಸರಿಯಾಗಿ ಇಳುವರಿ ಬರದೆ ರೈತರು ನಷ್ಟ ಅನುಭವಿಸುವಂತಾಗಿದೆ ಎಂದು ಜನಸೇವಾ ಫೌಂಡೇಷನ್ ರಾಜ್ಯಾಧ್ಯಕ್ಷರಾದ ಜಾವೇದ್ ಖಾನ್ ಅರೋಪಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಮಾತನಾಡಿ ರೈತರು ಪ್ರತಿ ಎಕರೆಗೆ 30ಸಾವಿರದವರೆಗೆ ವೆಚ್ಚ ಮಾಡಿದ್ದರೆ ಅದ್ದರೆ ಎಕರೆಗೆ 50 ಚೀಲದವರೆಗೆ ಬೆಳೆಯುವ ಭತ್ತದ ಬೆಳೆ ಕಳಪೆ ಬೀಜದಿಂದಾಗಿ ಸರಿಯಾಗಿ ಇಳುವರಿ ಬರದೆ ಭತ್ತದ ಬೆಳೆ ನಷ್ಟವಾಗಿದ್ದರು ಕೂಡ ಕೃಷಿ ಇಲಾಖೆ ರೈತರಿಗೆ ಕನಿಷ್ಟ ಎಕರೆಗೆ 50 ಸಾವಿರದವರೆಗೆ ನಷ್ಟ ಪರಿಹಾರವನ್ನು ಕೊಡಿಸುವುದಕ್ಕೆ ಮುಂದಾಗಿಲ್ಲ ಹಾಗೂ ಕಳಪೆ ಬೀಜ ಮಾರಾಟಗಾರರ ಮೇಲೆ ಇದುವರೆಗೂ ಯಾವುದೆ ಕಾನೂನು ಕ್ರಮ ಕೈಗೊಳ್ಳದೆ ಇರುವುದರಿಂದ ಹಾಗೂ ಬೆಳೆ ನಷ್ಟ ವಿಮೆ ಪಾವತಿಸಿದರು ಕೂಡ ರೈತರಿಗೆ ವಿಮಾ ಸಂಸ್ಥೆಯವರು ಯಾವುದೆ ಪರಿಹಾರ ನೀಡದೆ ಇರುವುದರಿಂದ ನ.19 ರಂದು ಜನಸೇವಾ ಫೌಂಡೇಷನ್,ದಲಿತ ಸೇನೆ ,ಕರ್ನಾಟಕರಾಜ್ಯ ರೈತ ಸಂಘ ಸಹಯೋಗದೊಂದಿಗೆ ಸಾವಿರಾರು ರೈತರೊಂದಿಗೆ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ತಹಸೀಲ್ದಾರ್ ಕಚೇರಿಯವರೆಗೆ ಬೃಹತ್ ಪ್ರತಿಭಟನೆ ನಡೆಸಲಾಗುವುದು ನಂತರ ತಾ.ಪಂ. ಹಳೇ ಕಚೇರಿ ಆವರಣದಲ್ಲಿ ಹೋರಾಟ ನಡೆಸಲಾಗು □ವುದು ಎಂದು ತಿಳಿಸಿದರು.

ತಾ.ಅಧ್ಯಕ್ಷರಾದ ತಾಜುದ್ದೀನ್ ಚೀಕಲಪರ್ವಿ, ಸಿದ್ದರೆಡ್ಡಿ, ಹುಸೇನ್ ಬಾಷ, ಮಾಬುದಿನ್ನ್,ಅಜೀತ್, ಸೇರಿದಂತೆ ಇನ್ನಿತರರು ಇದ್ದರು.

## ತಾರತಮ್ಯ ಮಾಡದೇ ನೈಜ ಪ್ರತಿಭೆಗಳನ್ನು ಗುರುತಿಸಿ: ಎನ್ ಸತ್ಯನಾರಾಯಣ

**ಮರಿಯಮ್ಮನಹಳ್ಳಿ, ನ.13–** ನಿಷ್ಪಕ್ಷಪಾತವಾಗಿ ತೀರ್ಪು ನೀಡಿ ಮಕ್ಕಳಲ್ಲಿನ ಪ್ರತಿಭೆಗೆ ಮನ್ನಣೆ ನೀಡಿ ಎಂದು ಎನ್‌ಎಲ್‌ಎನ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಎನ್ ಸತ್ಯನಾರಾಯಣರು ನಿರ್ಣಾಯಕರಿಗೆ ಸಲಹೆ ಮಾಡಿದರು.

ಅವರು ಪಟ್ಟಣದ ಪ್ರಿಯದರ್ಶಿನಿ ಬಾಲಕಿಯರ ಪ್ರೌಢಶಾಲಾ ಆವರಣದಲ್ಲಿ ಆಯೋಜಿಸಿದ್ದ ಮರಿಯಮ್ಮನಹಳ್ಳಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು.

ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸುವ ಗುರುತರ ಜವಾಬ್ದಾರಿ ಶಿಕ್ಷಕರದ್ದಾಗಿದ್ದು, ಸಮಯಕ್ಕೆ ಸರಿಯಾಗಿ ಮಕ್ಕಳಿಗೆ ಸೂಕ್ತ ಸಲಹೆ ಮಾರ್ಗದರ್ಶನದ ಅವಶ್ಯಕತೆ ಇದೆ ಎಂದರು. ಕ್ಲಸ್ಟರ್‌ನ ವಿವಿಧ ಶಾಲೆಯ ಎಲ್ಲಾ ಮಕ್ಕಳು ನಮ್ಮ ಮಕ್ಕಳೇ ಆಗಿದ್ದು, ನಿರ್ಣಾಯಕರು ಪ್ರಾಮಾಣಿಕ ನಿರ್ಣಯ ನೀಡಿ ಉತ್ತಮ ಪ್ರತಿಭೆ ಗುರುತಿಸಿ ತೀರ್ಪು ನೀಡಿ ಎಂದು ತೀರ್ಪುಗಾರರಿಗೆ ಸಲಹೆ ನೀಡಿದರು.ನಂತರ ಪ.ಪಂ.ಅಧ್ಯಕ್ಷ ಆದಿಮನಿ ಹುಸೇನ್ ಭಾಷರವರು ಮಾತನಾಡಿ,ಪ್ರತಿ ಮಗುವಿನಲ್ಲೂ ಒಂದಲ್ಲ ಒಂದು ಸುಪ್ತ ಪ್ರತಿಭೆಯಿದ್ದು ಅದನ್ನು ಗುರುತಿಸಿ ಪ್ರೋತ್ಸಾಹಿಸುವ ಅರ್ಥಪೂರ್ಣ ಕಾರ್ಯಕ್ರಮ ಇದಾಗಿದೆ. ನಿರ್ಣಾಯಕರು ಪಕ್ಷಪಾತ ಮಾಡದೇ ಸೂಕ್ತ ಪ್ರತಿಭೆಯನ್ನು ನಿರ್ಣಯಿಸಿ ಎಂದರು.ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಕ್ಷೇತ್ರ ಸಮನ್ವಯಾಧಿಕಾರಿ ಎಂ. ಶಿವಕುಮಾರ್, ಅಕ್ಷರ ದಾಸೋಹದ




ಸಹಾಯಕ ನಿರ್ದೇಶಕ ಅಯ್ಯಪ್ಪ, ಶಿಕ್ಷಣ ಸಂಯೋಜಕ ಎಂ ರಾಜು, ಕ್ಷೇತ್ರ ಸಮನ್ವಯಾಧಿಕಾರಿ ರೂಪ ಮಾತನಾಡಿದರು.

ಈ ಸಂದರ್ಭದಲ್ಲಿ ಪ್ರಿಯದರ್ಶಿನಿ ಪದವಿ ಕಾಲೇಜಿನ ಪ್ರಾಚಾರ್ಯ ಫಕೀರಪ್ಪ, ಪ್ರಿಯದರ್ಶಿನಿ ಪ. ಪೂ. ಕಾಲೇಜಿನ ಪ್ರಾಚಾರ್ಯ ಎಂ ಅಶೋಕ, ಮುಖ್ಯಗುರುಗಳಾದ ಶಿವಕುಮಾರ, ಪ್ರವೀಣ, ಗುರುವಪ್ಪ, ಚಂದ್ರಶೇಖರ ಪಾಟೀಲ್, ಶಿಕ್ಷಕಿಯರಾದ ಮಮತಾ, ಲಲಿತ ಹಾಗೂ ಇತರರು ಇದ್ದರು.ಕಾರ್ಯಕ್ರಮವನ್ನು ಪ್ರಿಯದರ್ಶಿನಿ ಪ್ರೌಢಶಾಲೆಯ ಮುಖ್ಯಗುರು ಕೆ ವೆಂಕಟೇಶ ಸ್ವಾಗತಿಸಿ, ಶಿಕ್ಷಕ ಸದಾನಂದ ವಂದಿಸಿದರು. ಕಾರ್ಯಕ್ರಮದಲ್ಲಿ ಸಿಆರ್‌ಪಿ ವಿ ಕರಿಬಸಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ ಶಿಕ್ಷಕ ಹನುಮಂತಪ್ಪ ನಿರ್ವಹಿಸಿದರು.ಪ್ರಿಯದರ್ಶಿನಿ ಆಂಗ್ಲ ಮಾಧ್ಯಮ ಶಾಲೆಯ ಹೆಚ್ ಎಂ ದಿಶಾ ಅರ್ಧನಾರೀಶ್ವರನಾಗಿ ಹಾಗೂಗಣೇಶ್ ಮಲ್ ಜೈನ್ ಶಾಲೆಯ ಚೈತನ್ಯಳು ಕಾಂತಾರ ವೇಷದಲ್ಲಿ ಹಾಗೂ ವಿವಿಧ ಛದ್ಮವೇಷಗಳಲ್ಲಿ ಮಕ್ಕಳು ಪ್ರೇಕ್ಷಕರ ಗಮನ ಸೆಳೆದರು.

# ಸಿಲಿಕಾನ್ ಸಿಟಿಯಲ್ಲಿ ಮಕ್ಕಳ ದತ್ತು ಸ್ವೀಕಾರಕ್ಕೆ ಎಲ್ಲಿಲ್ಲದ ಬೇಡಿಕೆ

**ಬೆಂಗಳೂರು, ನ. 13–** ಸಿಲಿಕಾನ್ ಸಿಟಿಯಲ್ಲಿ ಮಕ್ಕಳ ದತ್ತು ಸ್ವಿಕಾರಕ್ಕೆ ಎಲ್ಲಿಲ್ಲದ ಬೇಡಿಕೆ ಶುರುವಾಗಿದೆ. ವಿವಾಹಿತರ ಜತೆಗೆ ಅವಿವಾಹಿತರೂ ಕೂಡ ದತ್ತು ಮಕ್ಕಳ ಸ್ವಿಕಾರಕ್ಕೆ ಮುಗಿಬಿದ್ದಿದ್ದಾರೆ ಎಂಬ ಅಂಶ ರಾಜ್ಯ ದತ್ತು ಸಂಪನೂಲ ಪ್ರಾಧಿಕಾರದ ಮಾಹಿತಿಯಿಂದ ಬಹಿರಂಗಗೊಂಡಿದೆ.



ಸಿಲಿಕಾನ್ ಸಿಟಿಯಲ್ಲಿ ವರ್ಷದಿಂದ ವರ್ಷಕ್ಕೆ ಐದು ವರ್ಷದೊಳಗಿನ ಮಕ್ಕಳನ್ನು ಅದರಲ್ಲೂ ಹೆಣ್ಣು ಮಕ್ಕಳನ್ನು ದತ್ತು ಪಡೆದುಕೊಳ್ಳಲು ಬರುತ್ತಿರುವವರ ಸಂಖ್ಯೆ ದ್ವಿಗುಣಗೊಳ್ಳುತ್ತಲೆ ಇದೆಯಂತೆ.ಕಳೆದ ಐದು ವರ್ಷದಲ್ಲಿ ಬೆಂಗಳೂರಿನಲ್ಲಿ ದತ್ತು ಪಡೆದವರ ಸಂಖ್ಯೆಯಲ್ಲಿ ಭಾರಿ ಏರಿಕೆ ಕಂಡು ಬಂದಿದೆಯಂತೆ. ರಾಜ್ಯಕ್ಕೆ ಹೋಲಿಸಿದರೆ ಸಿಲಿಕಾನ್ ಸಿಟಿಯಲ್ಲೆ ದತ್ತು ಪಡೆಯುವವರ ಸಂಖ್ಯೆ ಹೆಚ್ಚುತ್ತಿರುವುದು ಕೂತುಹಲ ಕೆರಳಿಸಿದೆ.

ಬೆಂಗಳೂರಿನಲ್ಲಿ ಶೇ 72 ರಷ್ಟು ಹಾಗೂ ರಾಜ್ಯದಲ್ಲಿ ಶೇ. 20 ರಷ್ಟು ಮಂದಿ ಮಕ್ಕಳನ್ನು ದತ್ತು ಪಡೆದಿದ್ದಾರೆ. ಹೈಟಿ ಬಿಟಿ ದಂಪತಿಗಳು ದತ್ತು ಸ್ವಿಕಾರದ ಕಡೆ ಹೆಚ್ಚು ಗಮನ ಹರಿಸುತ್ತಿರುವುದು ಕಂಡು ಬಂದಿದೆ.ದತ್ತು ಸ್ವಿಕಾರಕ್ಕೆ ಹೆಚ್ಚಿನ ದಂಪತಿಗಳು ಒಲವು ಹೊಂದಿದ್ದು, ರಾಜ್ಯದಲ್ಲಿ ದತ್ತು ಪಡೆಯಲು ಇನ್ನೂ 2279 ಪೋಷಕರು ಕಾಯುತ್ತಿದ್ದಾರೆ ಎಂದು ರಾಜ್ಯ ದತ್ತು ಸಂಪನ್ಮೂಲ ಪ್ರಾಧಿಕಾರದ ಮಾಹಿತಿ ಬಹಿರಂಗಪಡಿಸಿದೆ.

ರಾಜ್ಯದಲ್ಲಿ 21 ಸರ್ಕಾರಿ ಹಾಗೂ 24 ಖಾಸಗಿ ದತ್ತು ಸ್ವಿಕಾರ ಸಂಸ್ಥೆಗಳಿವೆ. ಈ ಸಂಸ್ಥೆಗಳಿಂದ ಮಕ್ಕಳನ್ನು ದತ್ತು ಪಡೆಯುವವರು ಕನಿಷ್ಠ 2 ವರ್ಷ ಕಾಯುವ ಸ್ಥಿತಿ ನಿರ್ಮಾಣವಾಗಿದೆಯಂತೆ.

ಅದರಲ್ಲೂ ಒಂಟಿ ಪೋಷಕರು ದತ್ತು ಸ್ವಿಕಾರಕ್ಕೆ ಮುಂದೆ ಬರುತ್ತಿರುವುದು ವಿಶೇಷವಾಗಿದೆ. ಗರ್ಭಧಾರಣೆಗೆ ಮನಸ್ಸಿಲ್ಲದವರು, ಮಕ್ಕಳಗಾದ ಪೋಷಕರೂ ದತ್ತು ಮಕ್ಕಳನ್ನು ಪಡೆಯಲು ಹಾತೋರಿಯುತ್ತಿದ್ದಾರೆ.ಇತ್ತಿಚಿನ ದಿನಗಳಲ್ಲಿ ಅವಿವಾಹಿತರೂ ದತ್ತು ಸ್ವಿಕಾರಕ್ಕೆ ಮುಂದೆ ಬರುತ್ತಿರುವುದು ವಿಶೇಷವಾಗಿದೆ. ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ದತ್ತು ಪಡೆಯಲು ಹೆಚ್ಚು ಒಲವು ಕಂಡು ಬರುತ್ತಿದೆ.

ಚಿಕ್ಕವಯಸ್ಸಿನಲ್ಲಿ ಮಕ್ಕಳನ್ನು ದತ್ತು ಪಡೆದರೆ ಬಾಂಧವ್ಯ ವೃದ್ಧಿಯಾಗುತ್ತೆ ಅನ್ನೊ ನಂಬಿಕೆ ಹೆಚ್ಚಾದಿದೆ ಅದರಲ್ಲೂ ಹೆಣ್ಣು ಮಕ್ಕಳ ದತ್ತು ಸ್ವಿಕಾರದ ಆಸಕ್ತಿ ಕೂಡ ಹೆಚ್ಚಾಗುತ್ತಿರುವುದು ಗಮನಾರ್ಹ ವಿಚಾರವಾಗಿದೆ.

# ಕೃಷಿ ಮೇಳ: ಗಮನ ಸೆಳೆದ ಪುಗನೂರು ತಳಿಯ ಗಿಡ್ಡ ಹಸು

**ಬೆಂಗಳೂರು, ನ.13–**ಭಾರತದ ಮೂಲದ ಅತ್ಯಂತ ಚಿಕ್ಕ ಹಸು ಜಾತಿಯೆಂದರೆ ಪುಗನೂರು ಜಾತಿ. ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಪುಗನೂರು ಪ್ರದೇಶದಲ್ಲಿ ಈ ಜಾತಿ ಹುಟ್ಟಿಕೊಂಡಿದ್ದು, ಇಂದಿಗೂ ಅದೇ ಹೆಸರಿನಿಂದ ಪ್ರಸಿದ್ಧವಾಗಿದೆ. ಚಿತ್ರದಲ್ಲಿರುವ ಹಸುಗಳು ಈ ಪುಗನೂರು ಅಥವಾ ವೆಚ್ಚೂರು (ಕೇರಳ ಮೂಲದ) ಕುಬ್ಜ ಜಾತಿಯ ಹಸುಗಳಾಗಿರುವ ಸಾಧ್ಯತೆ ಹೆಚ್ಚು.



ಸುಮಾರು 70 ರಿಂದ 90 ಸೆ.ಮೀ. (ಸುಮಾರು 2.5 ರಿಂದ 3 ಅಡಿ) ಹೆಣ್ಣು ಹಸುಗಳು 100150 ಕಿ.ಗ್ರಾಂ, ಎತ್ತುಗಳು 115200 ಕಿ.ಗ್ರಾಂ.ಬಣ್ಣ: ಬಿಳಿ, ಹಸಿರುಬೂದು,ಅಥವಾ ಕಂದು ಕೆಲವೊಮ್ಮೆ ಎರಡು ಬಣ್ಣಗಳ ಮಿಶ್ರಣ (ಚಿತ್ರದಂತೆಯೇ) ಸಣ್ಣ, ಚಂದ್ರಾಕಾರದ ಕೊಂಬುಗಳು. ದೇಹದ ಗಾತ್ರಕ್ಕೆ ಸರಿಯಾಗಿ ಚೆನ್ನಾಗಿ ಅಭಿವೃದ್ಧಿಯಾಗಿದೆ. ಉದ್ದವಾಗಿದ್ದು, ತುದಿಯಲ್ಲಿ ಕಪ್ಪು ಕೂದಲಿನ ಗುಚ್ಛವಿರುತ್ತದೆ.

ಪ್ರತಿ ದಿನ 1 ರಿಂದ 3 ಲೀಟರ್. ತುಂಬಾ ದಪ್ಪ, ಕ್ರೀಮಿ ಸ್ವರೂಪದ, 68% ಕೊಬ್ಬಿನಾಂಶ ಹೊಂದಿದೆ. ಮಾನವನ ದೇಹಕ್ಕೆ ಸುಲಭವಾಗಿ ಜೀರ್ಣವಾಗುತ್ತದೆ, ಆಯುರ್ವೇದದ ಪ್ರಕಾರ ಔಷಧೀಯ ಗುಣ ಹೊಂದಿದೆ.

ಈ ಹಸುಗಳು ಅಲ್ಪ ಆಹಾರ ಹಾಗೂ ನೀರಿನಲ್ಲೇ ಬದುಕಬಲ್ಲವು.ಬಿಸಿಲು, ಬರದ ವಾತಾವರಣದಲ್ಲೂ ಸಹ ಶಕ್ತಿಯುತವಾಗಿ ಉಳಿಯುವ ದೃಢಶರೀರದ ಜಾತಿ.ರೋಗ ನಿರೋಧಕ ಶಕ್ತಿ ಹೆಚ್ಚಾಗಿರುವುದರಿಂದ ವೈದ್ಯಕೀಯ ವೆಚ್ಚ ಕಡಿಮೆ.

ಸಣ್ಣ ರೈತರ ಹಾಗೂ ಹಳ್ಳಿ ಕುಟುಂಬಗಳಿಗೆ ಅತ್ಯಂತ ಸೂಕ್ತವಾದ ಜಾತಿ. ಸಂರಕ್ಷಣೆ ಮತ್ತು ಸಾಂಸ್ಕೃತಿಕ ಮಹತ್ವಈ ಜಾತಿ ಇದೀಗ ವಿಲೋಪದ ಅಪಾಯದಲ್ಲಿರುವ ಅಪರೂಪದ ಜಾತಿ.ಭಾರತೀಯ ಪಶುಸಂಗೋಪನಾ ಮಂಡಳಿ ಹಾಗೂ ರಾಷ್ಟ್ರೀಯ ಹಾಲು ಅಭಿವೃದ್ಧಿ ಮಂಡಳಿ ಇದರ ಸಂರಕ್ಷಣೆಗೆ ಮುಂದಾಗಿದೆ. ದಕ್ಷಿಣ ಭಾರತದ ಅನೇಕ ದೇವಾಲಯಗಳಲ್ಲಿ ಪುಗನೂರು ಹಸುಗಳನ್ನು ಪೂಜಾ ಪ್ರಯುಕ್ತ ಸಾಕಲಾಗುತ್ತದೆ.

"ಸಣ್ಣ ದೇಹ, ದೊಡ್ಡ ಗುಣ" ಎಂಬ ಹೇಳಿಕೆಯು ಪುಗನೂರು ಜಾತಿಯ ಹಸುಗಳಿಗೆ ಸಂಪೂರ್ಣ ಅನ್ವಯಿಸುತ್ತದೆ. ಕಡಿಮೆ ವೆಚ್ಚದಲ್ಲಿ ಹೆಚ್ಚು ಪೋಷಕ ಹಾಲು ನೀಡುವ ಈ ಹಸುಗಳು ಈಗ ಬೆಂಗಳೂರು ಜಿಕೆ ವಿಕೆ ಯಲ್ಲಿ ಆಯೋಜಿಸಿರುವ ಕೃಷಿ ಮೇಳಗಳಲ್ಲಿ ಜನರ ಆಕರ್ಷಣೆಯ ಕೇಂದ್ರವಾಗಿವೆ.

# ವಿಜಯಪುರ ಸೇರಿ 4 ರೈಲು ನಿಲ್ದಾಣಗಳಿಗೆ ಸಂತರ ನಾಮಕರಣಕ್ಕೆ ಶಿಫಾರಸು

**ಬೆಂಗಳೂರು, ನ.13–**ರಾಜ್ಯದ ವಿಜಯಪುರ, ಬೆಳಗಾವಿ, ಬೀದರ್ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿರುವ ಸೂರಗೊಂಡನ ಕೊಪ್ಪ ರೈಲು ನಿಲ್ದಾಣಗಳನ್ನು ಸ್ಥಳೀಯ ಸಾಂಸ್ಕೃತಿಕ ಮಹತ್ವಕ್ಕೆ ಪೂರಕವಾಗಿ ಬದಲಿಸಿ, ಹೊಸ ನಾಮಕರಣ ಮಾಡಬೇಕೆಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ ಬಿ ಪಾಟೀಲ ಅವರು ಶಿಫಾರಸು ಮಾಡಿದ್ದು, ಈ ಸಂಬಂಧವಾಗಿ ಕೇಂದ್ರ ಗೃಹ ಸಚಿವಾಲಯಕ್ಕೆ ಪತ್ರ ಬರೆದಿದ್ದಾರೆ.



ಈ ಪತ್ರದಲ್ಲಿ ವಿಜಯಪುರ ರೈಲು ನಿಲ್ದಾಣಕ್ಕೆ ಜ್ಞಾನಯೋಗಿ ಸಿದ್ಧೇಶ್ವರ ಸ್ವಾಮೀಜಿ ರೈಲು ನಿಲ್ದಾಣ ಎಂದು, ಬೆಳಗಾವಿ ನಿಲ್ದಾಣಕ್ಕೆ ಬಸವ ಮಹಾಸ್ವಾಮೀಜಿ, ಬೀದರ್ ನಿಲ್ದಾಣಕ್ಕೆ ಚನ್ನಬಸವ ಪಟ್ಟದ್ದೇವರು ಮತ್ತು ಸೂರಗೊಂಡನಕೊಪ್ಪ ನಿಲ್ದಾಣಕ್ಕೆ ಭಾಯಗಡ ರೈಲು ನಿಲ್ದಾಣ ಎಂದು ಹೊಸ ಹೆಸರುಗಳನ್ನು ಇಡಬೇಕೆಂದು ಪ್ರಸ್ತಾಪಿಸಿದ್ದಾರೆ.

ಸರ್ಕಾರ ಈ ನಾಲ್ಕು ನಿಲ್ದಾಣಗಳಿಗೆ ಸಂತರ ಹೆಸರು ಇಡಲು ಶಿಫಾರಸು ಮಾಡಿದ್ದು, ಅದಕ್ಕೆ ಗೃಹ ಸಚಿವಾಲಯದ ಒಪ್ಪಿಗೆ ಬೇಕಾಗಿದೆ. ಹೀಗಾಗಿ ಮೂಲಸೌಕರ್ಯ ಇಲಾಖೆ ಮೂಲಕ ಪತ್ರ ರವಾನೆ ಮಾಡಲಾಗಿದೆ ಎಂದು ಅವರು ವಿವರಿಸಿದರು.

ಈ ನಾಲ್ಕೂ ರೈಲು ನಿಲ್ದಾಣಗಳು ನೈರುತ್ಯ ರೈಲ್ವೆಯ ಹುಬ್ಬಳ್ಳಿ ವಿಭಾಗದ ವ್ಯಾಪ್ತಿಯಲ್ಲಿವೆ. ಕರ್ನಾಟಕದ ಈ ಭಾಗಗಳಿಗೆ ತಾವು ಸೂಚಿಸಿರುವ ಸಂತರ ಕೊಡುಗೆ ಮೌಲಿಕವಾಗಿದೆ. ಈ ಶಿಫಾರಸನ್ನು ಅಂಗೀಕರಿಸಿ, ಮರುನಾಮಕರಣದ ಸಂಗತಿಯನ್ನು ಆದಷ್ಟು ಬೇಗ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಸಚಿವರು ಕೋರಿದ್ದಾರೆ.

# ಸಣ್ಣ ಶಬ್ದಕ್ಕೂ ಬೆಚ್ಚಿ ಬೀಳುತ್ತಿದೆ ದೆಹಲಿ

**ನವದೆಹಲಿ, ನ. 13–** ಕಾರ್ ಸ್ಫೋಟ ಪ್ರಕರಣದ ನಂತರ ರಾಷ್ಟ್ರ ರಾಜಧಾನಿ ದೆಹಲಿ ಜನ ಒಂದು ಸಣ್ಣ ಶಬ್ದಕ್ಕೂ ಬೆಚ್ಚಿ ಬೀಳುತ್ತಿದ್ದಾರೆ.ಇಂದು ಬೆಳಿಗ್ಗೆ ನೈಋತ್ಯ ದೆಹಲಿಯ ಮಹಿಪಾಲಪುರ ಪ್ರದೇಶದಲ್ಲಿ ಬಸ್ ಟೈರ್ ಸ್ಫೋಟದಿಂದ ಉಂಟಾದ ದೊಡ್ಡ ಶಬ್ದವು ಸ್ಥಳೀಯರಲ್ಲಿ ಭಯ ಸೃಷ್ಟಿಸಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.



ಮಹಿಪಾಲಪುರದ ರಾಡಿಸನ್ ಬಳಿ ಸ್ಫೋಟದಂತಹ ದೊಡ್ಡ ಶಬ್ದ ಕೇಳಿಬಂದಿದೆ ಎಂದು ಬೆಳಿಗ್ಗೆ 9.19 ಕ್ಕೆ ತಮಗೆ ಕರೆ ಬಂದಿದೆ ಎಂದು ದೇಹಿ ಅಗ್ನಿಶಾಮಕ ಸೇವೆಗಳು ತಿಳಿಸಿವೆ, ನಂತರ ಅವರು ಸ್ಥಳಕ್ಕೆ ಮೂರು ಅಗ್ನಿಶಾಮಕ ವಾಹನಗಳನ್ನು ಕರೆಸಿದರು. ವ್ಯಾಪಕ ಪರಿಶೀಲನೆಯ ನಂತರವೂ ಅಧಿಕಾರಿಗಳಿಗೆ ಸ್ಥಳದಲ್ಲಿ ಏನೂ ಸಿಗಲಿಲ್ಲ ಎಂದು ಪೊಲೀಸ್ ಉಪ ಆಯುಕ್ತ (ನೈಋತ್ಯ) ಅಮಿತ್ ಗೋಯೆಲ್ ತಿಳಿಸಿದ್ದಾರೆ.ಕರೆ ಮಾಡಿದವರನ್ನು ಸಂಪರ್ಕಿಸಲಾಯಿತು ಮತ್ತು ಅವರು ಗುರುಗ್ರಾಮ್‌ಗೆ ಹೋಗುವಾಗ ದೊಡ್ಡ ಶಬ್ದ ಕೇಳಿಬಂದಿದೆ ಎಂದು ತಿಳಿಸಿದರು. ನಾವು ಎಲ್ಲವನ್ನೂ ಪರಿಶೀಲಿಸಿದ್ದೇವೆ ಮತ್ತು ಏನೂ ಕಂಡುಬಂದಿಲ್ಲ ಎಂದಿದ್ದಾರೆ.

ಸ್ಥಳೀಯ ವಿಚಾರಣೆಯ ಸಮಯದಲ್ಲಿ, ಧೌಲಾ ಕುವಾನ್ ಕಡೆಗೆ ಹೋಗುತ್ತಿದ್ದ ಡಿಟಿಸಿ ಬಸ್‌ನ ಹಿಂಭಾಗದ ಟೈರ್ ಸಿಡಿದಿದೆ ಮತ್ತು ಶಬ್ದ ಅಲ್ಲಿಂದ ಬಂದಿದೆ ಎಂದು ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು ಎಂದು ಡಿಸಿಪಿ ಹೇಳಿದರು.ಪರಿಸ್ಥಿತಿ ಸಾಮಾನ್ಯವಾಗಿದೆ ಮತ್ತು ಚಿಂತಿಸಲು ಏನೂ ಇಲ್ಲ ಎಂದು ಅವರು ಹೇಳಿದರು.

# ಬಹುಮುಖ ವ್ಯಕ್ತಿತ್ವದ ಮೇರು ಸಾಹಿತಿ ಡಾ.ಗಿರೀಶ್ ಕಾರ್ನಾಡ

**ಕಲಬುರಗಿ:ನ.13–** ಗಿರೀಶ್ ಕಾರ್ನಾಡ ಅವರು ನಾಟಕಕಾರ, ರಂಗಕರ್ಮಿ, ಲೇಖಕ, ಸಿನಿಮಾ ನಟ, ನಿರ್ದೇಶಕ, ಚಿಂತಕ, ಹೋರಾಟಗಾರ, ವಿಮರ್ಶಕರಾಗಿ ಬಹುಮುಖ ವ್ಯಕ್ತಿತ್ವದ ಮಹಾನ ಸಾಧಕ. ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿ ದೊರಕಿಸಿಕೊಟ್ಟ ಅವರ ಕೊಡುಗೆ ಅನನ್ಯವಾಗಿದೆ ಎಂದು ಉಪನ್ಯಾಸಕ, ಲೇಖಕ ಎಚ್.ಬಿ.ಪಾಟೀಲ ಅಭಿಪ್ರಾಯಪಟ್ಟರು.

ನಗರದ ಶಹಾಬಜಾರ ಮಹಾದೇವ ನಗರದಲ್ಲಿರುವ 'ಸ್ವಾತಿ ಮತ್ತು ಶಿವಾ ಪ್ರೌಢಶಾಲೆ'ಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ 'ರಾಜ್ಯೋತ್ಸವ ಮಾಸಾಚರಣೆಯ ಪ್ರಯುಕ್ತ ಸರಣಿ ಉಪನ್ಯಾಸ ಕಾರ್ಯಕ್ರಮ-12 ಮತ್ತು ಬಳಗದ 5999ನೇ ಕಾರ್ಯಕ್ರಮವಾದ 'ಕನ್ನಡಕ್ಕೆ ಡಾ.ಗಿರೀಶ್ ಕಾರ್ನಾರ ಕೊಡುಗೆ' ಎಂಬ ವಿಶೇಷ ಉಪನ್ಯಾಸದಲ್ಲಿ ಕಾರ್ನಾರ ಭಾವಚಿತ್ರಕ್ಕೆ ಪುಷ್ಪನಮನಗಳನ್ನು ಸಲ್ಲಿಸಿ ಅವರು ಮಾತನಾಡಿದರು.

'ಯಯಾತಿ', 'ತಲೆದಂಡ', 'ಹಯವದನ', 'ಅಂಜುಮಲ್ಲಿಗೆ', 'ನಾಗಮಂಡಲ' ಸೇರಿದಂತೆ ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ರಾಜ್ಯೋತ್ಸವ, ಪದ್ಮಶ್ರೀ, ಪದ್ಮಭೂಷಣ, ಜ್ಞಾನಪೀಠ ಸೇರಿದಂತೆ ಹಲವು ಪ್ರಶಸ್ತಿಗೆ ಭಾಜನರಾಗುವ ಮೂಲಕ ನಾಡಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅನೇಕ ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಅವರು ಪ್ರತಿಭಾವಂತ, ಪ್ರಗತಿಪರ ಲೇಖಕರಾಗಿ ನಾಡಿಗೆ ತಮ್ಮದೇ ಆದ ಸೇವೆಯನ್ನು ಸಲ್ಲಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕಸಾಪ ಉತ್ತರ ವಲಯ ಗೌರವ ಅಧ್ಯಕ್ಷ ಶಿವಯೋಗಪ್ಪ ಬಿರಾದಾರ ಮಾತನಾಡಿ, ಸಂಸ್ಥೆಯ ಅಧ್ಯಕ್ಷ ಚನ್ನಬಸಪ್ಪ ಗಾರಂಪಳ್ಳಿ, ಶಾಲೆಯ ಮುಖ್ಯ ಶಿಕ್ಷಕಿ ಸಂಗೀತಾ ಸಿ.ಗಾರಂಪಳ್ಳಿ, ಸಿಬ್ಬಂದಿ ಸುನೀತಾ, ವಿದ್ಯಾರ್ಥಿ ಪ್ರತಿನಿಧಿಗಳಾದ ಆದಿತ್ಯ, ಅದಿತಿ ಸೇರಿದಂತೆ ಇನ್ನಿತರರಿದ್ದರು.

# ಬಿಹಾರ ಗದ್ದುಗೆ ಯಾರ ಪಾಲು: ಇಂದು ನಿರ್ಧಾರ

**ಪಾಟ್ನಾ, ನ. 13–** ಇಡೀ ದೇಶದ ಕುತೂಹಲ ಮೂಡಿಸಿರುವ ಬಿಹಾರ ವಿಧಾನಸಭಾ ಚುನಾವಣೆಯ ಮತ ಎಣಿಕೆ ನಾಳೆ ನಡೆಯಲಿದ್ದು, ಬಿಹಾರದ ಅಧಿಕಾರದ ಗದ್ದುಗೆಯನ್ನು ಯಾರು ಏರಲಿದ್ದಾರೆ ಎಂಬುದು ನಾಳೆ ಬಹಿರಂಗವಾಗಲಿದೆ.



ಬಿಹಾರ ವಿಧಾನಸಭೆಯ 243 ಕ್ಷೇತ್ರಗಳಿಗೆ 2 ಹಂತಗಳಲ್ಲಿ ನವೆಂಬರ್ 6 ಮತ್ತು 11 ರಂದು ಮತದಾನ ನಡೆದಿತ್ತು. ಈ ಚುನಾವಣೆಯ ಮತ ಎಣಿಕೆ ನಾಳೆ ನಡೆಯಲಿದ್ದು, ಬಿಹಾರದ ಆಡಳಿತ ಚುಕ್ಕಾಣಿ ಎನ್‌ಡಿಎ ಪಾಲಾಗಲಿದೆಯೇ, ಇಲ್ಲವೆ ಇಂಡಿ ಒಕ್ಕೂಟ ಅಧಿಕಾರಕ್ಕೆ ಬರಲಿದೆಯೇ ಎಂಬುದು ಗೊತ್ತಾಗಲಿದೆ.

ಬಹುತೇಕ ಮತಗಟ್ಟೆ ಸಮೀಕ್ಷೆಗಳು ಬಿಹಾರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಭವಿಷ್ಯ ಹೇಳಿದ್ದು, ಈ ಮತಗಟ್ಟೆ ಸಮೀಕ್ಷೆಗಳು ನಿಜವೇ, ಸುಳ್ಳೆ ಎಂಬುದು ನಾಳೆ ಮತ ಎಣಿಕೆಯ ನಂತರ ಗೊತ್ತಾಗಲಿದೆ.

ಬಿಹಾರದ ವಿಧಾನಸಭಾ ಚುನಾವಣೆಯಲ್ಲಿ ಆರ್‌ಜೆಡಿ, ಕಾಂಗ್ರೆಸ್ ಸೇರಿದಂತೆ ಇಂಡಿ ಒಕ್ಕೂಟ ಮಹಾಘಟಬಂಧನ್ ರಚಿಸಿಕೊಂಡು ಬಿಜೆಪಿ, ಜೆಡಿಯುನ ಎನ್‌ಡಿಎ ವಿರುದ್ಧ ಚುನಾವಣೆಯಲ್ಲಿ ಸೆಣಸಾಡಿತ್ತು.

ಚುನಾವಣಾ ಪ್ರಚಾರ ರಂಗೇರಿ ಮತಗಟ್ಟೆ ಪರಿಷ್ಕರಣೆಯನ್ನು ಮುಂದಿಟ್ಟುಕೊಂಡು ಮಹಾಘಟಬಂಧನ್ ಎನ್‌ಡಿಎ ವಿರುದ್ಧ ತೀವ್ರ ವಾಗ್ದಾಳಿ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಎನ್‌ಡಿಎ ಬಿಹಾರದಲ್ಲಿ ಮಹಾಘಬಂಧನ್ ಅಧಿಕಾರಕ್ಕೆ ಬಂದರೆ ಜಂಗಲ್ ರಾಜ್ಯ ಮತ್ತೆ ಸ್ಥಾಪನೆಯಾಗುತ್ತದೆ. ಮಹಾಘಟಬಂಧನನ್ನು ಸೋಲಿಸಿ ಅಭಿವೃದ್ಧಿಗಾಗಿ ಎನ್‌ಡಿಎ ಅಧಿಕಾರಕ್ಕೆ ತನ್ನಿ ಎಂದು ಪ್ರಚಾರ ನಡೆಸಿತ್ತು.ಈ ಚುನಾವಣೆಯಲ್ಲಿ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಘಟಾನುಘಟಿ ನಾಯಕರುಗಳು ಎನ್‌ಡಿಎ ಪರ ಅಬ್ಬರದ ಪ್ರಚಾರ ನಡೆಸಿದ್ದರು. ಸೇರಿಗೆ ಸವಾಸೇರು ಎಂಬಂತೆ ಮಹಾಘಟಬಂಧನ್ ಪರ ಕಾಂಗ್ರೆಸ್‌ನ ರಾಹುಲ್‌ಗಾಂಧಿ, ಮಲ್ಲಿಕಾರ್ಜುನಖರ್ಗೆ, ಆರ್‌ಜೆಡಿಯನ ಮುಲಾಮ್ ಸಿಂಗ್ ಯಾದವ್, ತೇಜಸ್ವಿನಿ ಯಾದವ್ ಸೇರಿದಂತೆ ಹಲವು ನಾಯಕರು ಪ್ರಚಾರ ನಡೆಸಿದ್ದರು.

ಇಂಡಿ ಒಕ್ಕೂಟ ಬಿಹಾರದಲ್ಲಿ ಅಧಿಕಾರಕ್ಕೆ ಬಂದರೆ ತೇಜಸ್ವಿ ಯಾದವ್ ಮುಂದಿನ ಮುಖ್ಯಮಂತ್ರಿ ಎಂದು ಘೋಷಿಸಿದ್ದು ಎನ್‌ಡಿಎ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿಲ್ಲ. ಜೆಡಿಯುನ ಹಾಲಿ ಮುಖ್ಯಮಂತ್ರಿನಿತೀಶ್ ಕುಮಾರ್ ನೇತೃತ್ವದಲ್ಲೇ ಚುನಾವಣೆ ಎದುರಿಸುತ್ತೇವೆ ಎಂದಷ್ಟೇ ಹೇಳಿತ್ತು.

ಒಂದು ವೇಳೆ ಮತಗಟ್ಟೆ ಸಮೀಕ್ಷೆಗಳು ನಿಜವಾಗಿ ಎನ್‌ಡಿಎ ಅಧಿಕಾರಕ್ಕೆ ಬಂದರೆ ಬಿಹಾರದ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಮುಂದುವರೆಯುವರೋ ಇಲ್ಲವೋ ಹೊಸ ಮುಖ್ಯಮಂತ್ರಿ ಆಯ್ಕೆಯಾಗುತ್ತಾರೆಯೇ ಎಂಬುದು ಈಗ ಚರ್ಚೆಗೆ ಗ್ರಾಸವಾಗಿದೆ. ಎಲ್ಲದಕ್ಕೂ ನಾಳೆ ಸಂಜೆಯೊಳಗೆ ಉತ್ತರ ಸಿಗಲಿದೆ.

# ದೇವಸ್ಥಾನ ವ್ಯಾಪ್ತಿಯಲ್ಲಿ ಜಿ. ಪಂ. ಸಿಇಓ ನೇತೃತ್ವದಲ್ಲಿ ಶ್ರಮದಾನ

**ಯಾದಗಿರಿ,ನ.13–**ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಪ್ರವಾಸೋಧ್ಯಮ ಇಲಾಖೆ, ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ,ತಾಲೂಕ ಪಂಚಾಯತ ಶಹಾಪೂರ, ಗ್ರಾಮ ಪಂಚಾಯತ ಶಿರವಾಳ ಇವರ ಸಹಯೋಗದಲ್ಲಿ



ಪ್ರೇಕ್ಷಣಿಯ ಸ್ಥಳ ನಾದಯ್ಯ ನನ್ನಯ್ಯ ದೇವಸ್ಥಾನ ಹತ್ತಿರ ಶ್ರಮದಾನ ಚಟುವಟಿಕೆಯನ್ನು ಹಮ್ಮಿ ಕೊಳ್ಳಲಾಯಿತು. ಸದರಿ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಲವೀಶ್ ಒರಡಿಯಾ ,ಕಾರ್ಯ ನಿರ್ವಾಹಕ ಅಧಿಕಾರಿ, ಯಾದಗಿರಿ, ಶಹಾಪುರ,ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಯಾದಗಿರಿ ಹಾಗೂ ಸಹಾಯಕ ನಿರ್ದೇಶಕರು ನರೇಗಾ , ಅಧ್ಯಕ್ಷರು ಶಿರವಾಳ ಗ್ರಾಮ ಪಂಚಾಯತಿ, ಕಆಔ ಶಿರವಾಳ ,ಇನ್ನಿತರ ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಗ್ರಾಮ ಪಂಚಾಯತ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ,, ಶಿರವಾಳದ ಗ್ರಾಮಸ್ಥರು ಉಪಸ್ಥಿತರಿದ್ದರು. ಈ ಸ್ವಚ್ಛತೆ ಕಾರ್ಯಕ್ರಮದ ಅಂಗವಾಗಿ ದೇವಸ್ಥಾನದ ಸುತ್ತಲೂ ಸ್ವಚ್ಛತೆ ಮಾಡಲಾಯಿತು. ದೇವಸ್ಥಾನದ ಪುಷ್ಕರಣಿ ಸ್ವಚ್ಛತೆ ಮಾಡಲಾಯಿತು. ದೇವಸ್ಥಾನದ ವ್ಯಾಪ್ತಿಯಲ್ಲಿ ಸಸಿ ನೆಡಲಾಯಿತು ಹಾಗೂ ದೇವಸ್ಥಾನದ ಇತಿಹಾಸದ ಕುರಿತು ವಿವರಿಸಲಾಯಿತು.

# ದೇವಸ್ಥಾನ ಪಕ್ಕ ಹರಿಯುವ ಚರಂಡಿ ನೀರು :ಗ್ರಾಮಸ್ಥರ ಆಕ್ರೋಶ

**ಗುರುಮಠಕಲ್,ನ.13–** ಇಲ್ಲಿಗೆ ಸಮೀಪದ ಚಂಡರಕಿ ಗ್ರಾಮದಲ್ಲಿ, ಹನುಮನ ದೇವಸ್ಥಾನ ಮತ್ತು ಜುಮ್ಮಾ ಮಸೀದಿ ಹತ್ತಿರದ ಪವಿತ್ರಸ್ಥಳದಲ್ಲಿ ಪ್ರತಿ ದಿನಾಲು ಗ್ರಾಮದ ಸಾರ್ವಜನಿಕರು ಬಳಸಿಕೊಂಡು ಹೆಚ್ಚಾಗಿರುವ ನೀರು ಗ್ರಾಮದ ರಸ್ತೆಯ ಬದಿಯಲ್ಲಿ ಕಟ್ಟಿರುವ ಸಣ್ಣ ಕಾಲುವೆಯ ಮೇಲೇರಿ ಹರಿದು ಹೊಲಸು ನೀರು ಹರಿದು ಬರುವುದು. ತಿಂಗಳುಗಳು ಕಳೆದರೂ ಆ ವಾರ್ಡಿನ ಸದಸ್ಯರಾಗಲಿ, ಗ್ರಾಮ ಅಭಿವೃದ್ಧಿ ಅಧಿಕಾರಿಗಳಾಗಲಿ, ತಾಲೂಕ ಪಂಚಾಯತ್ ಅಧಿಕಾರಿಗಳಾಗಲಿ ಒಬ್ಬರೂ ಇತ್ತ ಕಡೆ ಗಮನ ಹರಿಸುತ್ತಿಲ್ಲ. ಮುಂಜಾನೆಯ ಸಮಯದಲ್ಲಿ ದೇವರ ದರುಶನಕ್ಕೆಂದು ಬರುವ ಭಕ್ತಾದಿಗಳು ಶುಚಿಯಾಗಿ ಭಕ್ತಿಯಿಂದ ದೇವರ ದರುಶನಕೆಂದುಬರುವ ಭಕ್ತರು ಅಂತಹ ಹೊಲಸು ನೀರನ್ನು ಬ ಕಾಲಿನಿಂದಲಿ ತುಳಿದು ಬರುವುದು ದೇವರ ದರ್ಶನ ಪಡೆಯುವುದು ಇಂತಹ ದುರಸ್ಥಿ ಚಂಡರಕಿ ಗ್ರಾಮ ದಲ್ಲಿ ಇದೆ. ಸರಕಾರವು ಗ್ರಾಮ ಸ್ವಚ್ಛತೆ ಗಾಗಿ ಸಾಕಷ್ಟು ಹಣ



ಖರ್ಚುಮಾಡಿದರೂ ಇಂತಹ ಒಳ್ಳೆಯ ಕೆಲಸ ಮಾಡಲು ಗ್ರಾಮಪಂಚಾಯತ್ ಮುಂದೆ ಬರುತ್ತಿಲ್ಲ. ಕಾರಣ ಸಾರ್ವಜನಿಕರ ಹಿತಕ್ಕಾಗಿ ಕೂಡಲೆ ಸ್ವಚ್ಛತೆ ಕಾರ್ಯವು ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮಂಜಾನೆಯ ಸಮಯದಲ್ಲಿ ಭೇಟಿ ನೀಡಿ ಸ್ಥಳವನ್ನು ಪರಿಶೀಲಿಸುವದರ ಜೊತೆಗೆ ಸ್ವಚ್ಛತೆಗೆ ಮುಂದಾಗಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ರಕ್ಷಣಾ ವೇದಿಕೆಯಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ

# ಕನ್ನಡ ಭಾಷೆ ಬೆಳವಣಿಗೆಗೆ ಕನ್ನಡ ಸಂಘಟನೆಗಳ ಕೊಡುಗೆ ಅಪಾರ : ಭೂಪನಗೌಡ ಪಾಟೀಲ್



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ನ.13–** ಕನ್ನಡ ನಾಡು, ನುಡಿ ರಕ್ಷಣೆಯ ಜೊತೆಗೆ ಕನ್ನಡ ಭಾಷೆ ಬೆಳವಣಿಗೆಗೆ ಕನ್ನಡಪರ ಸಂಘಟನೆಗಳ ಕೊಡುಗೆ ಅಪಾರ ವಾಗಿದೆ ಎಂದು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಭೂಪನಗೌಡ ಪಾಟೀಲ್ ಕರಡಕಲ್ ಹೇಳಿದರು.

ಪಟ್ಟಣದಲ್ಲಿ ಬುಧವಾರ ಕರ್ನಾಟಕ ರಕ್ಷಣಾ ವೇದಿಕೆ (ಹೆಚ್.ನಾರಾಯಣಗೌಡ ಬಣ) ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭ ವನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರ ಹಿತದೃಷ್ಠಿಯಿಂದ ನೀರಾವರಿ ಯೋಜನೆಯ ರಾಂಪುರ ಬಲದಂಡೆ ಯೋಜನೆ ಯನ್ನು ಉಳಿಸಿಕೊಳ್ಳಲು ಹೋರಾಟ ಹಮ್ಮಿಕೊಳ್ಳಬೇಕು ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ ಕೃಷಿಗೆ ಮಹತ್ವ ನೀಡಿ ಕೃಷಿ ವಿಜ್ಞಾನ ಪ್ರದೀಪಿಕೆ ಗ್ರಂಥ ರಚಿಸಿದ ಸಂತೆಕೆಲ್ಲೂರಿನ ಘನಮಠೇಶ್ವರ ಶಿವಯೋಗಿಗಳ ನಾಮಕರಣ ಮಾಡಲು ಸರಕಾರಕ್ಕೆ ಒತ್ತಾಯಿಸುವ ಕೆಲಸ ಆಗಬೇಕು. ಅಳಿವಿನಂಚಿನಲ್ಲಿರುವ ಪ್ರಜಾಪ್ರಭುತ್ವವನ್ನು ಉಳಿಸಲು ಶ್ರಮಿಸಬೇಕು ಸಂವಿಧಾನ ರಕ್ಷಣೆಗೆ ಬದ್ಧವಾಗಿರಬೇಕು. ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಕರವೇ ಅಧ್ಯಕ್ಷ ಮಾದೇಶ ಸರ್ಜಾಪೂರ, ಪ್ರಧಾನ ಕಾರ್ಯದರ್ಶಿ ಶರಣಬಸವ ಈಚನಾಳ, ಸಮ್ ಕಾಲೇಜು ಆಡಳಿತಾಧಿಕಾರಿ ವಿನಯಕುಮಾರ ಗಣಾಚಾರಿ, ವೈದ್ಯ ಪರಿಷತ್ ಅಧ್ಯಕ್ಷ ವೈದ್ಯ ಆನಂದ ಹೇರೂರು, ಉಪನ್ಯಾಸಕ ದುರುಗಪ್ಪ ಬಂಡೇಭಾವಿ, ಮುಖಂಡರಾದ ಲಕ್ಷ್ಮಿ ಹೂಲಗೇರಿ, ಸಂತೋಷ ಸೊಪ್ಪಿಮಠ, ರಘುನಾಥ, ದುರುಗಪ್ಪ ನಾಯಕ ಸೇರಿ ಇತರರು ಇದ್ದರು.

ಚುನಾವಣೆಗೆ ಸ್ಪರ್ಧಿಸುವ ಆಸಕ್ತ ಅಭ್ಯರ್ಥಿಗಳಿಗೆ ರಾಜಕೀಯ ನಾಯಕತ್ವದ ಕಾರ್ಯಾಗಾರ

# ವೀಕೇಂದ್ರಿಕರಣದಿಂದಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ಯಶಸಿಯಾಗುತ್ತದೆ: ಎಂ.ಡಿ. ರಸೂಲ್ ಗೋನಾಳ

ಯುವ ಮಾರ್ಗ ಸುದ್ದಿ



**ಮಸ್ಕಿ,ನ.13–** ಮೂರು ಹಂತದ ಪಂಚಾಯತಿ ವ್ಯವಸ್ಥೆಯಲ್ಲಿ ಅಧಿಕಾರ ಕೇಂದ್ರೀಕರಣಗೊಳ್ಳದೆ ವೀಕೇಂದ್ರಿಕರಣ ಗೊಂಡಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗುತ್ತದೆ. ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಪಂಚಾಯತಿರಾಜ್ ವ್ಯವಸ್ಥೆಗೆ ಹೆಚ್ಚಿನ ಮಹತ್ವವಿದ್ದು, ಪಂಚಾಯತಿ ರಾಜ್ ವ್ಯವಸ್ಥೆಯನ್ನು ಪ್ರಜಾಪ್ರಭುತ್ವದ ಬುನಾದಿ ಎಂದೇ ಕರೆಯಲಾಗುತ್ತದೆ ಎಂದು ಜ್ಞಾನಧಾಮ ಸಹಜ ಶಿಕ್ಷಣ ಯೋಜನಾ ವೇದಿಕೆಯ ಆಡಳಿತಾಧಿಕಾರಿ ಎಂ.ಡಿರಸೂಲ್ ಗೋನಾಳ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಗುರುವಾರ ರಾಜಕೀಯ ನಾಯಕತ್ವದ ಕಾರ್ಯಗಾರದ ಭೀತ್ತಿ ಪತ್ರವನ್ನು ಬಿಡುಗಡೆಗೊಳಿಸಿ ನಂತರ ಮಾತನಾಡಿದ ಅವರು ಜನಸಾಮಾನ್ಯರು ಆಡಳಿತದ ಹತ್ತಿರ ಬರಲು ಇರುವ ಏಕೈಕ ಅವಕಾಶವೆಂದರೆ ಅದು ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆ, ಅದರಲ್ಲೂ ಗ್ರಾಮ ಪಂಚಾಯತಿಗಳು ಮತ್ತು ಗ್ರಾಮಸಭೆಗಳು ಜನರ ಭಾಗವಹಿಸುವಿಕೆಯನ್ನು ಖಾತರಿ ಪಡಿಸುವದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪ್ರಮುಖ ಯೋಜನೆಗಳ ಹೊಣೆಗಾರಿಕೆಯನ್ನು ಗ್ರಾಮ ಪಂಚಾಯತಿಗಳಿಗೆ ನೀಡಲಾಗಿದ್ದು, ಗ್ರಾಮ ಪಂಚಾಯತಿಗಳನ್ನು ಗ್ರಾಮ ಸರ್ಕಾರ ಎಂದೇ ಕರೆಯಲಾಗುತ್ತದೆ ಎಂದರು.

ನಂತರ ಕರಿಯಪ್ಪ ಹಾಲಪೂರ, ಹನುಮಂತಪ್ಪ ಮುದ್ದಾಪುರು ಮಾತನಾಡಿ ಮುಂದಿನ ವರ್ಷಾರಂಭದಲ್ಲಿ ಲೋಕಲ್ ಫೈಟ್‌ಗೆ ಗ್ರಾಮೀಣ ಪ್ರದೇಶಗಳಲ್ಲಿ ಈಗಾಗಲೇ ಜನ ಅಣಿಯಾಗುತ್ತಿದ್ದು, ಗ್ರಾಮ ಪಂಚಾಯತಿ ಎಲೆಕ್ಷನ್ ಮೂಲಕ ಸಾಲು ಸಾಲು ಚುನಾವಣೆ ನಡೆಯುವ ನೀರಿಕ್ಷೆ ಇರುವದರಿಂದ ಪ್ರಜಾಪ್ರಭುತ್ವ ವಿಕೇಂದ್ರಿಕರಣ ವ್ಯವಸ್ಥೆಯ ಆಶಯ ಸೊರಗದಂತೆ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಸದಸ್ಯರಾಗ ಬಯಸುವ ಆಕಾಂಕ್ಷಿಗಳಿಗೆ ತರಬೇತಿ ನೀಡಿ ಸಮರ್ಥರನ್ನಾಗಿಸಲು ಈ ಕಾರ್ಯಾಗಾರವನ್ನು ಆಯೋಜಿಸಲಾಗಿರುವ ಜ್ಞಾನಧಾಮ ಸಹಜ ಶಿಕ್ಷಣ ಯೋಜನಾ ವೇದಿಕೆಯಿಂದ ಕಾರ್ಯಗಾರದ ನಡೆ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಯ ಕಡೆಗೆ ಎಂಬ ಪಂಚಾಯತಿ ಹಬ್ಬದ ಆರಂಭಿಕ ಹಂತದ ಪ್ರಕ್ರಿಯೆಗೆ ಚಾಲನೆ ನೀಡಿರುವುದು ಉತ್ತಮ ಬೆಳವಣಿಗೆಯಗಿದೆ ಎಂದರು ಸತೀಶಗೌಡ ತುರವಿಹಾಳ ಮತ್ತು ಪ್ರಸನ್ನ ಪಾಟೀಲ್ ಮಾತನಾಡಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಶಿವಪ್ಪ ನಾಯಕ. ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಮೈಬುಬಸಾಬ್ ಮುದ್ದಾಪೂರ, ಗೋವಿಂದಪ್ಪ ರಂಗಾಪೂರು, ನಾಗರಾಜ ಗುಡಸಲಿ ಸೇರಿದಂತೆ ಇನ್ನಿತರರಿದ್ದರು.

# ಲೊಯೋಲ ಶಾಲೆಯಲ್ಲಿ ವಿಜ್ಞಾನ, ಕಲೆ,ಕರಕುಶಲ ವಸ್ತುಪ್ರದರ್ಶನ ಕಾರ್ಯಕ್ರಮ

ಯುವ ಮಾರ್ಗ ಸುದ್ದಿ



**ಮಾನ್ವಿ,ನ.13–** ಪಟ್ಟಣದ ಲೊಯೋಲ ಶಾಲೆಯಲ್ಲಿ ನಡೆದ ವಿಜ್ಞಾನ, ಕಲೆ,ಕರಕುಶಲ ವಸ್ತುಪ್ರದರ್ಶನ ಮತ್ತು ಭಾಷೆಗಳ ಜ್ಞಾನ ಪ್ರದರ್ಶನ ಕಾರ್ಯಕ್ರಮವನ್ನು ಕಲ್ಮಠ ಆಯುರ್ವೇದ ಕಾಲೇಜಿನ ವೈದ್ಯರಾದ ಡಾ.ವಿಕ್ರಮಾದಿತ್ಯಜಾಂಗಿರ್ ಉದ್ಘಾಟಿಸಿ ಮಾತನಾಡಿ ವಿದ್ಯಾರ್ಥಿಗಳು ಭವಿಷ್ಯದ ಬಗ್ಗೆ ಉನ್ನತ ಕನಸುಗಳನ್ನು ಕಾಣುವ. ಪ್ರಶ್ನೆ ಕೇಳುವಂತಹ ಮನೋಭಾವವನ್ನು ಬೆಳೆಸಿಕೊಂಡಾಗ ಮಾತ್ರ ವಿಜ್ಞಾನಿಗಳಾಗುವುದಕ್ಕೆ ಸಾಧ್ಯವಾಗುತ್ತದೆ ನಿಮಲ್ಲಿ ಕುತುಹಲ ಮನೋಬಾವನೆಯನ್ನು ಬೆಳೆಸಿಕೊಂಡಲ್ಲಿ ಅನೇಕ ಆವಿಷ್ಕಾರಗಳ 'ನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದ್ದರಿಂದ ಇಂತಹ ಅಮೂಲ್ಯವಾದ ವೇದಿಕೆಯನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಆಯುರ್ವೇದ ಪಿತಾಮಹರಾದ ಚರಕ ಮತ್ತು ಸುಶ್ರುತರು ನಮಗೆ ಆರೋಗ್ಯದ ಹಲವು ಸುಲಾಭ ಸೂತ್ರಗಳನ್ನು ತಿಳಿಸಿಕೊಟ್ಟಿದ್ದಾರೆ ಎಂದು ತಿಳಿಸಿದರು

ಲೊಯೋಲ ಸಂಸ್ಥೆಯ ಮುಖ್ಯಸ್ಥರಾದ ಫಾ. ಸಿಪ್ರಿಯನ್ ಟೆಲ್ಲಿಸ್ ಎಸ್.ಜೆ. ರವರು ಮಾತನಾಡಿ ಯುರೇಕಾ – 2 ಎಂಬ ಘೋಷವಾಕ್ಯದೊಂದಿಗೆ ಪ್ರದರ್ಶನವನ್ನು ಏರ್ಪಡಿಸಲಾಗಿದೆ ವಿದ್ಯಾರ್ಥಿಗಳು ಯೋಚಿಸುವ ಮತ್ತು ಪರಿಹರಿಸುವ ಸಾಮರ್ಥ್ಯಗಳನ್ನುವಿಜ್ಞಾನ,ಕಲೆ, ಕರಕುಶಲ ಮತ್ತು ಭಾಷೆಗಳವಸ್ತು ಪ್ರದರ್ಶನದಿಂದ ಬೆಳೆಸಿಕೊಳ್ಳಬಹುದಾಗಿದೆ ಸೃಜನ ಶೀಲಚಟುವಟಿ ಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದರಿಂದ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು ಎಂದು ತಿಳಿಸಿದರು.

ಲೊಯೋಲ ಶಾಲೆಯ ನಿರ್ದೇಶಕರಾದ ಫಾ. ಸಿರಿಲ್ರಾಜ್, ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಜೂಲಿಯೇಟ್ ಮೋಂಟೇರೋ, ಸಹಾಯಕ ಮುಖ್ಯೋಪಾಧ್ಯಾಯ ಡೇವಿಡ್ ಕುಮಾರ್, ಕಾರ್ಯಕ್ರಮ ಸಂಯೋಜಕರಾದ ಶ್ರೀ ನಾಗರಾಜ್ , ಗಂಗಾಭವಾನಿ, ಸೇರಿದಂತೆ ಶಾಲೆಯ ಶಿಕ್ಷಕರು , ಪಾಲಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದರು.

# ನ್ಯೂಮೋನಿಯಾ ರೋಗದ ಬಗ್ಗೆ ನಿರ್ಲಕ್ಷ ಬೇಡ ಜಾಗೃತಿ ಇರಲಿ : ಡಾ,ಅಮರೇಶ ಪಾಟೀಲ್

ಯುವ ಮಾರ್ಗ ಸುದ್ದಿ



**ಲಿಂಗಸುಗೂರು,ನ.13–** ಚಳಿಗಾಲದ ಸಂದರ್ಭದಲ್ಲಿ ಹುಟ್ಟಿದ ಮಗುವಿನಿಂದ ಹಿಡಿದು ಐದು ವರ್ಷದ ಮಕ್ಕಳಲ್ಲಿ ಅತಿಯಾಗಿ ಕಂಡುಬರುವ ರೋಗ ನ್ಯೂಮೋನಿಯಾ. ಇದು ಸಾಮಾನ್ಯವಾಗಿ ನೇಗಡಿ, ಕೆಮ್ಮು ಜ್ವರದ ಲಕ್ಷಣಗಳನ್ನು ಹೊಂದಿದ್ದು ಇದನ್ನು ನಿರ್ಲಕ್ಷಿಸಬೇಡಿ ಜಾಗೃತಿ ಇರಲಿ ಎಂದು ತಾಲೂಕ ವ್ಯದ್ಯಾಧಿಕಾರಿ ಡಾ, ಅಮರೇಶ ಪಾಟೀಲ್ ಹೇಳಿದರು.

ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಏರ್ಪಡಿಸಿದ್ದ ವಿಶ್ವ ನ್ಯೂಮೋನಿಯಾ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೋಗದ ಭಗ್ಯ ಅಲಕ್ಷ ಮಾಡಿದಲ್ಲಿ ತೀವ್ರ ಉಸಿರಾಟದ ತೊಂದರೆಗುತ್ತದೆ.ಇದರಿಂದ ಮಗುವಿನ ಆರೋಗ್ಯದಲ್ಲಿ ತುಂಬಾ ಏರು ಪೇರಾಗುವ ಸಾಧ್ಯತೆ ಹೆಚ್ಚಿದೆ ಆದ್ದರಿಂದ ವೈದ್ಯರ ಸಲಹೆಯಂತೆ ಮಕ್ಕಳ ಆರೈಕೆ ಮತ್ತು ಸಕಾಲಿಕ ಚಿಕಿತ್ಸೆ ಅವಶ್ಯವಿದೆ ಎಂದು ಜಾಗೃತಿ ಮೂಡಿಸಿದರು.

ನಂತರ ಮಾತನಾಡಿದ ಚಿಕ್ಕ ಮಕ್ಕಳ ತಜ್ಞ ಡಾ, ಸಂಜೀವರೆಡ್ಡಿ, ಮಕ್ಕಳನ್ನು ಚಳಿಗಾಲದಲ್ಲಿ ಬೆಚ್ಚಗಿನ ವಾತಾವರಣದಲ್ಲಿ ಇರುವಂತೆ ನೋಡಿಕೊಳ್ಳಿ,.

ಅನಾವಶ್ಯಕವಾಗಿ ಮಕ್ಕಳೊಂದಿಗೆ ಪ್ರವಾಸ ಮಾಡಬಾರದು ತಾಯಂದಿರೂ ನಿಮ್ಮ ಮಕ್ಕಳಿಗೆ ಕಡ್ಡಾಯವಾಗಿ ಪಿ.ಸಿ.ವಿ ಚುಚ್ಚು ಮದ್ದು ಹಾಕಿಸಿ ನ್ಯೂಮೋನೀಯಾ ರೋಗವನ್ನು ತಡೆಗಟ್ಟಿ ಎಂದು ತಾಯಂದಿರಿಗೆ ಕರೆಕೊಟ್ಟರು.

ಈ ಸಂದರ್ಭದಲ್ಲಿ ಆರೋಗ್ಯ ಶಿಕ್ಷಣಾಧಿಕಾರಿ ಪ್ರಾಣೇಶ್. ಶುಶ್ರೂಷಕ ಅಧಿಕಾರಿಗಳಾದ ಹನುಮಂತರಾಯ್, ಭಾರತಿ.ಇಂದಿರಾ. ಪ್ರಭಾರ ಎಲ್.ಎಚ್.ವಿ ನಾಗರತ್ನ.ಕಾರ್ಯಕ್ರಮದ ವ್ಯವಸ್ಥಾಪಕಿ ಶಿವಲೀಲಾ ಮೇಟಿ.ಅಕೌಂಟ ಮ್ಯಾನೇಜರ್ ಪದ್ಮಾವತಿ ನಾಯಕ. ಬಸವರಾಜ. ವಸೀಂ ರೆಹಮಾನ್.ಇಲಿಯಾಸ್ ಸೇರಿ ಗರ್ಭಿಣಿಯರು,ತಾಯಂದಿರು ಇದ್ದರು.

# ಲಿಂಗಸುಗೂರು, ಗುರುಗುಂಟಾ ಗ್ರಾಮದಲ್ಲಿ ಇಸ್ಪೀಟ್, ಮಟಕಾ ಜೂಜಾಟಕ್ಕೆ ಕಡಿವಾಣ ಹಾಕಲು ಎಸ್‌ಪಿಗೆ ಮನವಿ

ಯುವ ಮಾರ್ಗ ಸುದ್ದಿ



**ರಾಯಚೂರು,ನ.13–** ಜಿಲ್ಲೆಯ ಲಿಂಗಸುಗೂರು ಹಾಗೂ ಗುರುಗುಂಟಾ ಗ್ರಾಮದಲ್ಲಿ ಮಟ್ಕಾ, ಇಸ್ಪೀಟ್ ಹಾಗೂ ಇನ್ನಿತರೆ ಅಕ್ರಮ ಚಟುವಟಿಕೆಗಳು ಹೆಚ್ಚಾಗಿದ್ದು ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿ ಕನ್ನಡ ಸೇನೆ ಕರ್ನಾಟಕ ಜಿಲ್ಲಾ ಸಮಿತಿಯಿಂದ ಬುಧವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಲಿಂಗಸುಗುರು ತಾಲೂಕು ಹಾಗೂ ಗುರುಗುಂಟಾ ಗ್ರಾಮ ಹಾಗೂ ಸುತ್ತಮುತ್ತಲು ಮಟ್ಕಾ,ಇಸ್ಪೀಟ್ ಅಡ್ಡೆಗಳು ಹೆಚ್ಚಾಗಿವೆ ಅನೇಕ ಕಡೆ ಅಕ್ರಮ ಚಟುವಟಿಕೆ ನಡೆಯುತ್ತಿದೆ. ಲಿಂಗಸುಗೂರು ತಾಲೂಕಿನ ರಾಯಚೂರು ಮುಖ್ಯ ರಸ್ತೆಯಲ್ಲಿ ಇಸ್ಪೀಟ್ ಕ್ಲಬ್ ಗಳಿವೆ. ಸುತ್ತಮುತ್ತಲಿನ ಅನೇಕ ಕೂಲಿ ಕಾರ್ಮಿಕರು, ರೈತರು,ಹಟ್ಟಿ ಚಿನ್ನದ ಗಣಿ ಕಂಪನಿಯ ಕಾರ್ಮಿಕರು ಹಣದ ಆಸೆಗಾಗಿ ಇಸ್ಪೀಟ್, ಮಟ್ಕಾ ಜೂಜಾಟದಲ್ಲಿ ಹಣ ಕಳೆದುಕೊಳ್ಳುತ್ತಿದ್ದಾರೆ. ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಅಕ್ರಮಕ್ಕೆ ಸಾತ್ ನೀಡುತ್ತಿದ್ದಾರೆ ಎಂದು ದೂರಿದರು.

ಕೂಡಲೇ ಲಿಂಗಸುಗುರು, ಗುರುಗುಂಟಾ ಗ್ರಾಮದಲ್ಲಿ ನಡೆಯುತ್ತಿರುವ ಇಸ್ಪೀಟ್, ಮಟ್ಕಾ ಬುಕ್ಕಿಗಳನ್ನು ಸ್ಥಳೀಯ ಪೊಲೀಸರಿಂದ ಪತ್ತೆ ಹಚ್ಚಿ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು, ಇಲ್ಲದಿದ್ದರೆ ಸಂಘಟನೆಯಿಂದ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಈ ವೇಳೆ ಜಿಲ್ಲಾಧ್ಯಕ್ಷ ಎಂ.ಬಸವರಾಜ, ಕಾರ್ಯಾಧ್ಯಕ್ಷ ಹನುಮೇಶ ನಾಯಕ ಮೇಟಿ, ಉಪಾಧ್ಯಕ್ಷ ಶರಣೋಜಿ ಪವಾರ್, ಗೋವಿಂದ, ಶಿವಕುಮಾರ ಇದ್ದರು.

# ಅಂಚೆ ವಿತರಕನ ನಿರ್ಲಕ್ಷ್ಯ –ಕ್ರಮಕ್ಕೆ ಆಗ್ರಹ

ಯುವ ಮಾರ್ಗ ಸುದ್ದಿ



**ಕವಿತಾಳ,ನ.13–**ಪಟ್ಟಣದ ಅಂಚೆ ಕಛೇರಿಯ ಅಂಥೆ ವಿತರಕ ವಿಶ್ವನಾಥಗೌಡ ಅವರ ನಿರ್ಲಕ್ಷ್ಯದಿಂದಾಗಿ ಚೆಕ್‌ಬುಕ್ ಪಡೆಯಲು ಪರದಾಡಿದ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಪಟ್ಟಣದ ಹುಸೇನ್ ಬಾಷಾ ತಂದೆ ಮಷಾಕ್ ಸಾಬ್ ಅವರಿಗೆ ದಿನಾಂಕ 12.09.2025 ರಂದು ಬ್ಯಾಂಕ್ ನಿಂದ ಅಂಥೇ ಮೂಲಕ ಚೆಕ್‌ಬುಕ್ ಕಳುಹಿಸಲಾಗಿದ್ದು ಅಂಚೆ ನಂಬರ್ ಜೆಬಿ0310557861ಎನ್ ಇದ್ದು ಇದು ಬುಧವಾರ ಅಂಚೆ ಕಛೇರಿಗೆ ಬಂದಿದೆ ವಿಳಾಸ ಸರಿಯಾಗಿ ಇದ್ದರೂ ಸಹ ತಲುಪಿಸದೆ ಮರಳಿ ಬ್ಯಾಂಕ್‌ಗೆ ಕಳುಹಿಸಿದ್ದಾರೆ, ಸರಿಯಾದ ವಿಳಾಸವಿದ್ದರೂ ಸಹ ಅವುಗಳನ್ನು ವಿತರಿಸದೆ, ಮೋಬೈಲ್ ನಂಬರ್ ಇಲ್ಲ, ವಾರ್ಡ್ ನಂಬರ್ ಇದ್ದರೂ ಅಲ್ಲಿಗೆಹೊಗದೆ ವಿಚಾರ ಮಾಡದೆ ಆಲಕ್ಷ್ಯತನದಿಂದ ಅವುಗಳನ್ನು ಮರಳಿ ಕಳಿಸುವ ಕೆಲಸವನ್ನು ಮಾಡಿದ್ದಾರೆ ಇಂತಹ ನಿರ್ಲಕ್ಷ್ಯವಹಿಸಿರುವ ಅಂಚೆ ವಿತರಕನ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಜೈಭಾರತ ಸಂಘದ ಸದಸ್ಯರು ಜಿಲ್ಲಾ ಅಂಚೆ ಅಧೀಕ್ಷಕರಿಗೆ ಮನವಿ ನೀಡಿ ಆಗ್ರಹಿಸಿದ್ದಾರೆ.

# ಹದಗೆಟ್ಟ ಹಡಗಲಿ ರಸ್ತೆ : ವಾಹನ ಸವಾರರಿಗೆ ಪರದಾಟ




ಯುವ ಮಾರ್ಗ ಸುದ್ದಿ

**ಮಸ್ಕಿ,ನ.13–** ತಾಲೂಕಿನ ಹಡಗಲಿ ರಸ್ತೆ ಸಂಪೂರ್ಣ ಹದಗೆಟ್ಟದಿಂದ ವಾಗನಗಳ ಸವಾರರು ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ.

ತಲೇಖಾನ ಗ್ರಾಮದಿಂದ ನಾಗಲಾಪೂರು ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿದ್ದು, ತಲೇಖಾನ ಗ್ರಾಮ ಪಂಚಾಯತಿ ವ್ಯಾಪ್ತಿಯಯಲ್ಲಿ ವಿಂಡೋ ಪಾವರ್ ವಿದ್ಯುತ್ ಕಂಬಗಳನ್ನು ಅಳವಡಿಸುತ್ತಿರುವದರಿಂದ ವಿದ್ಯುತ್ ಕಂಬಗಳನ್ನು ಕೊಂಡುಯ್ಯೋತ್ತಿರುವ ಭಾರೀ ಪ್ರಮಾಣದ ವಾಹನಗಳ ಓಡಾಟದಿಂದ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ಗ್ರಾಮಸ್ಥರು ಆರೋಪಿಸಿದರು. ಆದ್ದರಿಂದ ಮುಂದಿನ ದಿನಗಳಲ್ಲಿ ಈ ರಸ್ತೆ ಮಾರ್ಗವಾಗಿ ಭಾರೀ ಗಾತ್ರದ ವಾಗನಗಳ ಓಡಾಟವನ್ನು ಸ್ಥಗಿತಗೊಳಿಸಬೇಕೆಂದು ಹಡಗಲಿ ಮತ್ತು ಹಡಗಲಿ ತಾಂಡದ ನಿವಾಸಿಗಳ ಒತ್ತಾಯವಾಗಿದೆ.

# ಈರುಳ್ಳಿ ಬೆಲೆ ಕುಸಿತ ರೈತರಿಗೆ ಸಂಕಟ



**ಕವಿತಾಳ,ನ.13–**ಈರುಳ್ಳಿ ಬೆಲೆ ಕ್ವಿಂಟಾಲ್‌ಗೆ 300–400 ಮಾರಾಟವಾಗುತ್ತಿದ್ದು ಬೆಲೆ ಕುಸಿತದಿಂದಾಗಿ ರೈತರು ಪರದಾಡುವಂತಾಗಿದ್ದು ಕೈಗೆ ಬಂದ ತುತ್ತು ಬಾಯಿಗೆಬಾರದಂತಾಗಿ ರೈತರಿಗೆ ಸಂಕಟ ಉಂಟಾಗಿದೆ.

ಪಟ್ಟಣ ಸಮೀಪದ ವಟಗಲ್ ಗ್ರಾಮದ ರೈತ ಶರಣಪ್ಪ ಎನ್ನವರು ಒಂದು ಎಕರೆ ಹೊಲದಲ್ಲಿ ಈರುಳ್ಳಿ ಬಿತ್ತನೆ ಮಾಡಿದ್ದು ಬೆಲೆ ಇಳಿತದಿಂದಾಗಿ ತೊಂದರೆ ಅನುಭವಿಸುವಂತಗಿದೆ. ಈ ಕುರಿತು ಪತ್ರಿಕೆಯೊಂದಿಗೆ ಮತನಾಡಿದ ರೈತ ಶರಣ್ಣಪ ಎನ್ 'ರೈತರು ಬೆಳೆದ ಬೆಳೆಗಳಿಗೆ ಬೆಲೆಯಿಲ್ಲದಂತಾಗಿದ್ದು ಒಂದು ಕ್ವಿಂಟಾಲ್‌ಗೆ 300–400 ಕೇಳುತ್ತಿದ್ದು, ಒಂದು ಎಕರೆಯಲ್ಲಿ ಈರುಳ್ಳಿ ಬಿತ್ತನೆ ಮಾಡಲು ಕೀಟನಾಶಕ, ಗೊಬ್ಬರ, ಕೂಲಿಕಾರರ ಕೂಲಿ ಸೇರಿದಂತೆ ಖರ್ಚು ಮಾಡಿದ ಹಣ ಸಹ ವಾಪಸ್ಸು ಬಾರದಂತಾಗಿದೆ, ಇದೆ ರೀತಿಯಾಗಿ ರೈತರು ಬೆಳೆದ ಬೆಳೆಗಳಿಗೆ ಬೆಲೆ ಸಿಗದೆ ಹೋದರೇ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಬಂದೊದಗಬಹುದು ಆದ್ದರಿಂದ ಸರ್ಕಾರ ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ನಿಡುವ ಮುಲಕ ಸಂಕಷ್ಟದಲ್ಲಿರುವ ರೈತರ ಹಿತ ಕಾಪಾಡಬೇಕು' ಎಂದು ತಮ್ಮ ಅಳಲನ್ನು ತೊಡಿಕೊಂಡಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H